I have looked into the issues referred to in your letter cited above. You have referred to the three Irrigation Schemes of Andhra Pradesh, i.e., (a) Srisailam Right Branch Canal, (b) Pulichintala and (c) Bheema Lift Irrigation Scheme, which were posed to the Government of India for investment clerance. In this connection, I enclose copies of the letter dated 14.6.2001 and 24.6.2001, addressed by the Hon'ble Chief Minister of karnataka to the Union Minister for Water Resources and the Prime Minister, respectively, wherein the objections of the Government of Karnataka to these three projects as well as the Telugu-Ganga Project and Srisailam Left Branch Canal have been clearly spelt out.

As pointed out by the Hon'ble Chief Minister, the Supreme Court has specifically observed that the Central Government, while clearing projects of the lowest riparian State, should exercise their discretion so that the lowest riparian State should not be allowed to proceed ahead with large scale water projects for utilisation of surplus water in excess of allocated

quantity. Since these new projects of Andhra Pradesh involve utilisation of surplus water of the Krishna basin in excess of what is permissible, Government of India is requested to issue directions to Andhra Pradesh to stop execution of these schemes.

Incidentally, I also invite your kind reference to the correspondence between the State Government and Shri A.C.Thyagi, Commissioner (PP)m Ministry of Water Resources, on the subject of improvement of tanks in the Cauvery basin. Shri Thyagi in his letter dated 14.2.2001 has stated that any water resource developmental activities in the Cauvery basin can be undertaken only with the consent of co-basin States or specific orders of the Cauvery Water Disputes Tribunal. This view expressed by Shri Thyagi is not correct. The Tribunal has restricted the area under irrigation in Karnataka to 11.2 lakh acres, but has not placed any restriction on Karnataka taking up new water resource developmental activities in the Cauvery basin. On the other hand, in May, 1993, the Tribunal has specifically declined the prayer of Tamil Nadu to restrain Karnataka from undertaking/ proceeding with any new projects, dams, reservoirs, canals, etc.

Accordingly, there is no bar, whatsoever to Karnataka taking up the work of desiltation of the existing old tanks in the Cauvery basin and the question of obtaining prior consent of co-basin States or specific orders from the Tribunal does

not arise. This correct position may kindly be clarified by the Ministry of Water Resources to the Ministry of Economic Affairs.

With regards.

Yours sincerely,

Sd/-

(TERESA BHATTACHARYA)

Shri B.N.Navalawala,
Secretary to Government of India,
Ministry of Water Resources,
Shram Shakti Bhawan,
Rafi Marg, New Delhi-110 001

Copy for information to:

1. Additional Chief Secretary,
2. Additional Chief Secretary & Development Commissioner,
3. Principal Secretary, Minor Irrigation,
4. Principal Secretary to Chief Minister
5. Secretary, Water Resources.

Sd/-

(TERESA BHATTACHARYA)

CM 527 GOI 2001
S.M.KRISHNA BANGALORE-560001
CHIEF MINISTER DATED 14-6-2001

Dear Sri Arjun Charan Sethiji,

Sub: Krishna Basin Projects- Andhra Pradesh.

Ref: 1. Judgement dated 25.4.2000 by the Constitution Bench of Supreme Court in O.S. No.1 of 1997.

2. My letter dated 4.1.2001 to the Hon'ble Prime Minister and letter dated 6.1.2001 to you.

3. Your letter dated 20.2.2001

****

I wish to draw your attention to the fact that the Government of Andhra Pradesh has, in Krishna Bain, taken up a series of new irrigation projects of large size to divert the water for irrigation in its territory. In my above letter cited at(2), I had pointed out how and in what manner such projects are outside the scope of "liberty to use" the surplus water, as defined by the Supreme Court in the above judgement(1). I had also drawn your attendtion to the specific observation of the Supreme Court in the above judgement(1), which are once again reproduced below:

"..... it is appropriate for the Central Government to exercise the discretion while granting any scheme or projects of the lower riparian State and bearing in mind, what is really meant by the liberty granted, so that the lowest riparian State

should not be allowed to proceed ahead with large scale water projects for utilisation of surplus waters in excess of allocated quantity over which the State has no right"

" It is Central Government which has exercise this discretion while clearing projects of the lowest riparian State and it should be so exercised that there should not be any apprehensions in the minds of the Upper States that for all times to come the right of sharihng surplus water in any manner be endangered"

However, in the above letter(3), you have mentioned that Srisailam Right Bank Canal, Bhima Lift Irrigation Project and Pulichintala Diversion do not involve use of "surplus water" of the Krishna Basin. With regard to Telugu-Ganga Project and Srisailam Left Bank Canal, you have informed that "they have not yet been cleared by the Central Water Commission and are as yet unapproved projects."

The Krishna Water Disputes Tribunal (KWDT), no doubt, has allocated 800 tmc of water to Andhra Pradesh out of 2060 tmc of dependable water in the Krishna Basin. The K.C.Canal was protected for 39.9tmc and Krishna Delta was protected for 181.2 tmc of water. Your Ministry's contentions reflected in para(a) and (b) of the above letter(3) that Srisailam Right Bank Canal is planned partly against savings of 8 tmc of water from the modernisation of K.C.Canal and Pulichintala and Bhima Lift Projects are planned against the savings of 29 tmc of water from the Krishna Delta Modernisation, are not factually correct. The savings of such large quantity is hard to believe, if one scrutinises the Project Reports and available data.

The view of your Ministry that it "has always been advocating that all State Governments should take up only approved projects and should not commit funds to unapproved projects", is understandable in so far as projects taken under the plan expenditure (refer KWDT Report, Chapter XI). However, in case of new projects taken up by Andhra Pradesh, the role of Central Government, as observed by the Supreme Court is more than declaration of general views. The Andhra Pradesh Government, when it attempts to divert the surplus water of Krishna basin, actually exceeds its utilisation permissible under the KWDT Decision, which is binding on all the basin States under Section 6 of the Inter-State Water Dispute Act, 1956.

S.M.KRISHNA BANGALORE-560001
CHIEF MINISTER DATED 24-6-2001

Dear Sir,

I am surprised to read news paper interview given by the Secretary. Ministry of Water Resources, Government of India. This comes despite my letter dated 14.6.2001 and without any consideration of the same. Please note that we do not accept the position that the said three projects of Srisailam Right Bank Canal. Bhima Lift Irrigation and Pulichintala Diversion Scheme are planned against "saving" and not againt "surplus waters".

Srisailam Left Bank Canal, Pulichintala Diversion and Bhima Lift project are planned to utilize 19 tmc, 9 tmc and 20 tmc of water respectively in the Krishna Basin. It is really hard to believe that 48 tmc of water in total, planned for utilization in these projects, could be obtained by achieving savings in the utilizations of K.C. Canal and Krishna delta region. Morever, your Ministery should note that if savings in K.C. Canal and Delta region are possible, the claims of Andhra pradesh before the Krishna Water Disputes Tribunal for protection to 39.9 tmc in respect of K.C.Canal and 181.2 tmc in respect of Delta region as "committed uses" were incorrect.

Under these circumstances, I request you to look into the matter. The clerance, if already granted, may kindly be

cancelled forthwith. Further, directions should be issued to the Government of Andhra Pradesh to stop the works on the said three projects.

With kind regards,

Yours sincerely,

Sd/-

(S.M.KRISHNA)

To,

Sri Atal Behari Vajpayeeji,
Hon'ble Prime Minister,
Government of India,
7, Race Course Road,
NEW DELHI.

ಈ ತಿದ್ದುಪಡಿಯನ್ನು ನಾನು ತಮಗೆ ತಿಳಿಸುತ್ತಿದ್ದೇನೆ. ನಮ್ಮ ರಾಜ್ಯ ಸರ್ಕಾರವು ಈಗಾಗಲೇ ಸರ್ವೋಚ್ಚ ನ್ಯಾಯಾಲಯದ ಸಂವಿಧಾನದ ಪೀಠದ ಮುಂದೆ ಏನೊಂದು ದಾವೆಯನ್ನು ಹೂಡಿದೆಯೋ ಅದು ವಿಚಾರಣೆಗೆ ಬರಬೇಕಾಗಿದೆ. ಈಗಾಗಲೇ ಸರ್ವಪಕ್ಷಗಳ ಸಭೆಯಲ್ಲಿ ಹಲವಾರು ವಿವರಗಳನ್ನು ನೀಡಲಾಗಿದೆ. ಸದನಕ್ಕೆ ನಾವು ತೆಗೆದುಕೊಂಡಿರತಕ್ಕಂತಹ ಕ್ರಮಗಳ ಬಗ್ಗೆ ಹಾಗೂ ನಡೆದಿರತಕ್ಕಂತಹ correspondence between the Central Government and the State Government and between our government and Andhra Pradesh government ಹಾಗೂ ನಾವು ಕೋರ್ಟಿಗೆ ಹೋಗಿರತಕ್ಕಂತಹ ವಿವರಗಳನ್ನು ಈ ಸಂದರ್ಭದಲ್ಲಿ ತಮ್ಮ ಎದುರಿಗೆ ನಾನು ಸಾದರಪಡಿಸಿದ್ದೇನೆ.

+ ಶ್ರೀ ಜಗದೀಶ್ ಶೆಟ್ಟರ್(ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮ್ಯಾಜಿಷ್ಟ ಹೆಚ್.ಕೆ.ಪಾಟೀಲ್‌ರವರು ಈ ಒಂದು ವಿಷಯದ ಬಗ್ಗೆ ಬಹಳ ಒಂದು ಸುದೀರ್ಘವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ಈ ವಿಷಯವು ಅಷ್ಟೇ ಪ್ರಾಮುಖ್ಯ ಹಾಗೂ ಮಹತ್ವದ್ದು ಆಗಿದೆ. ಅದರ ಬಗ್ಗೆ ಪ್ರಶ್ನೆಯೇ ಇಲ್ಲ. ಇಲ್ಲಿ ನಾನು ಒಂದೆರಡು ಸ್ಪಷ್ಟೀಕರಣಗಳನ್ನು ಕೇಳಬಯಸುತ್ತೇನೆ. ಈಗಾಗಲೇ ನೀವು ಸುಪ್ರೀಂಕೋರ್ಟಿಗೆ ಒಂದು ಪಿಟಿಷನ್‌ನನ್ನು ಫೈಲ್ ಮಾಡಿದ್ದೀರಿ, ಒಎಎಸ್ 1:97ರಲ್ಲಿ ಒಂದು ಇಂಟೀರಿಯಮ್ ಅಪ್ಲಿಕೇಷನ್‌ನನ್ನು ಕೊಟ್ಟಿದ್ದೀರಿ. ಇಲ್ಲಿ ನಾನು ಪ್ರಸ್ತಾಪ ಮಾಡುವುದೇನೆಂದರೆ, ಎಲ್ಲಾ ಸರ್ವಪಕ್ಷಗಳ ನಾಯಕರ ಸಭೆಯನ್ನು ದಿನಾಂಕ:17-5-2001 ರಂದು ಮಾನ್ಯ ಮುಖ್ಯಮಂತ್ರಿಗಳು ಕರೆದಿದ್ದರು. ಆಗ ಆ ಸಭೆಯಲ್ಲಿ ಎಲ್ಲರೂ ಇದ್ದವು, ಅಲ್ಲಿ ನಮ್ಮ ನಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದವು ಮತ್ತು ಆಂಧ್ರಪ್ರದೇಶದ ಅನ್-ಅಪ್ರೂವ್ಡ್ ಪ್ರಾಜೆಕ್ಟ್‌ಗಳಾದ, ತೆಲುಗು ಗಂಗಾ ಯೋಜನೆ, ಶ್ರೀಶೈಲಂ ಎಡದಂಡೆ ಕಾಲುವೆ ಯೋಜನೆ, ಶ್ರೀಶೈಲಂ ಬಲದಂಡೆ ಕಾಲುವೆ ಯೋಜನೆ, ಪುಲಿ ಚಿಂತಲಾ ಯೋಜನೆ, ಭೀಮಾ ಪತ ನೀರಾವರಿ ಯೋಜನೆ ಅದರ ಬಗ್ಗೆ ಕಾಮಗಾರಿಯನ್ನು ಮಾಡುತ್ತಿದ್ದಾರೆ ಅದನ್ನು ತಡೆಯಬೇಕು, ಅದರ ಬಗ್ಗೆ ಲೀಗಲ್ ಪ್ರೊಸಸ್, ಕಾನೂನು ಸಹಾಯಗಳನ್ನು ಪಡೆದುಕೊಳ್ಳಬೇಕೆನ್ನುವಂತಹದ್ದು ಅವೊತ್ತು ಆಲ್ ಪಾರ್ಟಿ ಮೀಟಿಂಗ್‌ನಲ್ಲಿ ಒಂದು ಏಕಾಭಿಪ್ರಾಯ ವ್ಯಕ್ತವಾಗಿತ್ತು/ ದಿನಾಂಕ 17-5-01ರಂದು, ಅದರ ಜೊತೆಗೆ ತುಮಕೂರು ಜಿಲ್ಲೆ ಮಧುಗಿರಿ ಹತ್ತಿರ ಆಂಧ್ರದ ಬೌಂಡ್ರಿಗೆ ಅಲ್ಲೇನು ಅವರು ಫೀಡರ್ ಚಾನಲ್ ಮಾಡುತ್ತಿದ್ದಾರೆ ಅದರ ಕಾಮಗಾರಿಯನ್ನು ತಕ್ಷಣ ನಿಲ್ಲಿಸುವ ಬಗ್ಗೆ ಏನಾದರೂ ಒಂದು ಸೂಟ್ ಫೈಲ್ ಮಾಡಿ ಅಥವಾ ಪಿಟಿಷನ್ ಫೈಲ್ ಮಾಡಿ ಆ ಕೆಲಸವನ್ನು ನಿಲ್ಲಿಸಬೇಕೆನ್ನುವುದು ಅವೊತ್ತು ನಿರ್ಣಯವಾಯಿತು.

ಶ್ರೀ ಹೆಚ್.ಕೆ.ಪಾಟೀಲ್: ಮಾನ್ಯ ವಿರೋಧಪಕ್ಷದ ನಾಯಕರು ಒಪ್ಪುವುದಾದರೆ, ನಾನು ಈಗಾಗಲೇ ಮಾನ್ಯ ಸಭಾಪತಿಯವರಿಗೆ ಒಂದು ಪತ್ರ ಕಳುಹಿಸಿದ್ದೇನೆ. ಆ

ಫೀಡರ್ ಚಾನಲ್ ಬಗ್ಗೆ ನಾನು ನಾಳೆ ಸ್ಟೇಟ್‌ಮೆಂಟ್ ಮಾಡುತ್ತಿದ್ದೇನೆ. ಅದರ ಬಗ್ಗೆ ಕೆಲವು ಏವರಗಳನ್ನು ಕೂಡಬೇಕಾಗುತ್ತದೆ. ಆ ಬಗ್ಗೆ ನಾನು ಸದನದಲ್ಲಿ ಸ್ಟೇಟ್‌ಮೆಂಟ್ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಸರ್ಕಾರದ ಕಡೆಯಿಂದ ಏನು ಲೋಪವಾಗಿದೆ ಅದನ್ನು ಹೇಳುತ್ತಿದ್ದೇನೆ. ದಿನಾಂಕ 17-5-01ಕ್ಕೆ ಆಲ್ ಪಾರ್ಟಿ ಮೀಟಿಂಗ್ ಮಾಡಿದ್ದೇವೆ. ಅಲ್ಲಿ ಒಂದು ನಿರ್ಣಯ ಕೈಗೊಂಡಿದ್ದೇವೆ. ಹಾಗೆ ನಿರ್ಣಯ ಕೈಗೊಂಡ ಮೇಲೆ ಇವರು ಸುಪ್ರೀಂ ಕೋರ್ಟ್‌ಗೆ ಐಎ ಫೈಲ್ ಮಾಡಿದ್ದು ದಿನಾಂಕ 29-6-01ಕ್ಕೆ, ಅಂದರೆ ಮೋರ್‌ದ್ಯಾನ್ ಒನ್ ಮಂಥ್ ಅಲ್ಲಿ ಲ್ಯಾಪ್ಸ್ ಆಯಿತು. ಅದು ಏಕೆ ಇಷ್ಟು ಲೇಟ್ ಮಾಡಿದಿರಿ ಎನ್ನುವುದು ಒಂದು ಪ್ರಶ್ನೆ. ಫೀಡರ್ ಚಾನಲ್ ಇರಬಹುದು ಕಾಮಗಾರಿಗಳು ಇರಬಹುದು. ಇದು ಏನಾಗುತ್ತದೆಂದರೆ, ಇವತ್ತು ಆ ಫೀಡರ್ ಚಾನಲ್ ಕಾಮಗಾರಿ ಎಲ್ಲಾ ಮುಗಿದುಹೋಗಿದೆ. ಈಗ ಕಾನೂನು ಕ್ರಮ ಕೈಗೊಂಡರೆ ಇಂಟರೀಯಮ್ ಆರ್ಡರ್ ಎಲ್ಲಿ ಅಫೆಕ್ಟ್ ಆಗುತ್ತದೆ? ಅದೇರೀತಿ ಇಲ್ಲಿ ಆಲ್ ಪಾರ್ಟಿ ಮೀಟಿಂಗ್ ಡಿಸಿಷನ್ ಆದ ಮೇಲೆ ತತ್‌ಕ್ಷಣವೇ ನೀವು ಒಎಸ್ 1:70-97 ಇರಬಹುದು ಅಥವಾ ಇಂಡಿಪೆಂಡೆಂಟಾಗಿರಬಹುದು ನಮ್ಮ ಸುಪ್ರೀಂಕೋರ್ಟ್ ವಕೀಲರು ಅವರ ಕಡೆಯಿಂದ ಕಾನೂನಿನ ಒಪೀನಿಯನ್ ತಾವು ತೆಗೆದುಕೊಂಡಿರಬೇಕು. ಅವರ ಒಂದು ನಿರ್ಣಯದ ಮೇಲೆ ತಾವು ಒಂದು ಐಐ ಹಾಕಿದ್ದೀರಿ. ಕಾನೂನಿನ ಪ್ರಕಾರ ಮಾತನಾಡುವಾಗ, ಇವತ್ತು ಯಾವುದೋ ಒಂದು ಕೇಸು ಡಿಸ್‌ಪೋಸಲ್ ಆಗಿಬಿಡುತ್ತದೆ. ಆ ಜಡ್ಜ್‌ಮೆಂಟ್ ಆದಮೇಲೆ ಅದರಲ್ಲೇ ಮತ್ತೆ ನಾವು ಇಂಟರೀಯಮ್ ಅಪ್ಲಿಕೇಷನ್ ಹಾಕಲಿಕ್ಕೆ ಬರುತ್ತದೆಯೇ ಎನ್ನುವುದು ಕಾನೂನಿನ ಪ್ರಕಾರ ಅವರು ಒಪೀನಿಯನ್ ಕೊಟ್ಟರಬಹುದು, ತಾವು ಹಾಕಿರಬಹುದು. ಅದರ ಬಗ್ಗೆ ಸ್ವಲ್ಪ ಚಿಂತನೆಯಾಗಬೇಕಾಗುತ್ತದೆ. ಆದರೆ ಇವತ್ತು ನೀವು ಪ್ರೊಸೀಡ್ ಮಾಡಿದ್ದೀರಿ. ಅದನ್ನೇ ಬಹುಶಃ ದಿನಾಂಕ 17-5-01ರಂದು ಆಲ್ ಪಾರ್ಟಿ ಮೀಟಿಂಗ್ ಆದ ತಕ್ಷಣ ತಾವು ಫೈಲ್ ಮಾಡಿದ್ದರೆ ಏತ್ ಇನ್ ಏಕ್‌ದೊಳಗೆ ಫೈಲ್ ಮಾಡಿದ್ದರೆ ಬಹಳಷ್ಟು ಸಮಸ್ಯೆಗಳು ಬಗೆಹರಿಸಲಿಕ್ಕೆ ಸಾಧ್ಯವಿದ್ದವು.

ಶ್ರೀ ಹೆಚ್.ಕೆ.ಪಾಟೀಲ್: ಫೀಡರ್ ಚಾನಲ್ ಬಗ್ಗೆ ನಾಳೆ ಸ್ಟೇಟ್‌ಮೆಂಟ್ ಮಾಡುತ್ತಿದ್ದೇನೆ. ಆಗ ಎಷ್ಟು ನಿಧಾನವಾಗಿ ಎನ್ನುವುದನ್ನು ಚರ್ಚೆ ಮಾಡೋಣವಂತೆ.

ಶ್ರೀ ಜಗದೀಶ್ ಶೆಟ್ಟರ್: ಅದರ ಬಗ್ಗೆ ಮಾತನಾಡುವುದಿಲ್ಲ. ಅನ್-ಅಪ್ರೂವ್ಡ್ ಪ್ರಾಜೆಕ್ಟ್ ಏನಿವೆ ಅದರ ಬಗ್ಗೆ ಇಂಗ್ಲೀಷ್ ಪತ್ರಿಕೆಯಲ್ಲಿ ಸೆಂಟ್ರಲ್ ವಾಟರ್ ಕಮೀಷನ್‌ನವರು ಈ ಪ್ರಾಜೆಕ್ಟ್‌ಗಳಿಗೆ ಅನುಮತಿಯನ್ನು ಕೊಟ್ಟಿದ್ದಾರೆನ್ನುವ ನ್ಯೂಸ್ ಪ್ರಕಟವಾಯಿತು. ಆ ನ್ಯೂಸ್ ಪ್ರಕಟವಾದ ಮೇಲೆ ಅದು ಸರಿ ಇದೆಯೋ ಇಲ್ಲವೋ

ಅದನ್ನು ಕರೆಕ್ಷನ್ ಮಾಡುವ ಬಗ್ಗೆ ಅದನ್ನು ಪರಿಪೂರ್ಣ ಮಾಡುವಂತಹ ಕೆಲಸವನ್ನು ರಾಜ್ಯ ಸರ್ಕಾರದವರು ಮಾಡಲಾರದೆ, ಮಾನ್ಯ ಮುಖ್ಯಮಂತ್ರಿಗಳು ಸೀದಾ ಪತ್ರಿಕೆಗಳಿಗೆ ಹೋದರು. ಸೆಂಟ್ರಲ್‌ವಾಟರ್ ಕಮೀಷನ್‌ರವರು ಏನು ಅಪ್ರೂವಲ್ ಕೊಟ್ಟಿದ್ದಾರೆ ಅದು ಸರಿಯಲ್ಲ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಮಾಡುತ್ತಿದೆ ಎಂದು ಕೇಂದ್ರ ಸರ್ಕಾರದ ಜೊತೆಯಲ್ಲಿ ಘರ್ಷಣೆ ಮಾಡುವ ರೀತಿಯಲ್ಲಿ ಒಂದು ಹೇಳಿಕೆಯನ್ನು ಅವರು ಕೊಟ್ಟರು. ನಂತರ ಮುಂದಿನ ಎರಡು ದಿವಸಗಳಲ್ಲಿ ಸೆಂಟ್ರಲ್ ವಾಟರ್ ಕಮೀಷನ್‌ನ ಹಿರಿಯ ಅಧಿಕಾರಿಗಳು ಒಂದು ಸ್ಟೇಟ್‌ಮೆಂಟ್ ಕೊಟ್ಟರು. ಆ ರೀತಿ ನಾವು ಯಾವುದಕ್ಕೂ ಅಪ್ರೂವಲ್ ಕೊಟ್ಟಿಲ್ಲವೆಂದು ಒಂದು ಹೇಳಿಕೆಯನ್ನು ಅವರು ಕೊಟ್ಟರು. ಅಂದರೆ ಅಷ್ಟು ತರಾತುರಿಯಾಗಿ ತಕ್ಷಣವೇ ಹೇಳಿಕೆಯನ್ನು ಯಾವುದೇ ಡಾಕ್ಯುಮೆಂಟ್ಸ್ ನಿಮ್ಮ ಕಡೆಗೆ ಇಲ್ಲದೆ ಕೊಡುವಂತಹದ್ದು ಸರಿಯಲ್ಲವೆನ್ನುವುದನ್ನು ಹೇಳುತ್ತೇನೆ. ಏಕೆಂದರೆ ಇವೆಲ್ಲಾ ಎಮೋಷನಲ್ ಇಷ್ಯೂಸ್ ಆಗಿವೆ. ಕಾವೇರಿ ಬೇಸಿನ್‌ದು ಇರಬಹುದು, ಕೃಷ್ಣಾ ಬೇಸಿನ್‌ದು ಇರಬಹುದು ಇವೆಲ್ಲಾ ಎಮೋಷನಲ್ ಇಷ್ಯೂಸ್ ಆಗಿವೆ. ನಾವು ಎಲ್ಲಿಯೋ ಒಂದು ಸಲ ಸಣ್ಣ ತಪ್ಪು ಮಾಡಿದರೆ ಅದರಿಂದ ತೊಂದರೆಗಳು ಬಹಳ ಆಗುತ್ತವೆ. ಈಗ ನಾವು ಸರಿಯಾದ ದಿಕ್ಕಿನಲ್ಲಿ ಹೋಗುತ್ತಿದ್ದೇವೆ. ಕಾನೂನು ಕ್ರಮಗಳನ್ನು ಕಾಲ ಕಾಲಕ್ಕೆ ತೆಗೆದುಕೊಳ್ಳುವ ಕೆಲಸ ಮಾಡುತ್ತಿದ್ದೇವೆ. ಅದರಲ್ಲಿ ಈ ರೀತಿಯ ಸಂಘರ್ಷವಾಗುವಂತಹ ಕೆಲಸವಾಗಬಾರದು ಎಂದು ಹೇಳುತ್ತೇನೆ. ಮುಖ್ಯಮಂತ್ರಿಗಳು ಆ ರೀತಿ ಒಂದು ರೀಆಕ್ಷನ್ ಕೊಟ್ಟದ್ದು ಸರಿಯಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೇಂದ್ರಸರ್ಕಾರದ ಜೊತೆ ಪತ್ರ ವ್ಯವಹಾರ ಮಾಡಿದ್ದು ಸೆಂಟ್ರಲ್ ವಾಟರ್ ಕಮೀಷನ್‌ನವರು ಪತ್ರ ವ್ಯವಹಾರ ಮಾಡಿದ್ದು ಅದೆಲ್ಲಾ ನಮ್ಮ ಮುಂದಿದೆ. ಅವರು ಈಗಾಗಲೇ ಕ್ರಮವನ್ನು ಕೈಗೊಂಡಿದ್ದಾರೆ. ಆದರೆ ಏನಾಗಬೇಕಾಗಿತ್ತು ಅಂದರೆ 17ನೇ ತಾರೀಖಿಗೆ ಆಲ್ ಪಾರ್ಟಿ ಮೀಟಿಂಗ್‌ನಲ್ಲಿ ಏನು ಡಿಸಿಷನ್ ತೆಗೆದುಕೊಂಡಿದ್ದೇವೆ. ಎರಡು ಮೂರು ದಿನ ಅಥವಾ ಒಂದು ವಾರದಲ್ಲಿ ಫೈಲ್ ಮಾಡಿದ್ದರೆ ಅದರದೊಂದು ರಿಪ್ಲಿಕೇಷನ್ ಬೇರೆಯಾಗುತ್ತಿತ್ತು. ನೀವು ಏಕೆ ಲೇಟ್ ಮಾಡಿದಿರಿ ಎನ್ನುವುದು ನಮ್ಮ ಪ್ರಶ್ನೆ. ಒಎಸ್1:97ರಲ್ಲಿ ಈಗ ಏನು ತಾವು ಐಐ ಫೈಲ್ ಮಾಡಿದಿರಿ ಇವೆಲ್ಲ ಅನ್ ಅಪ್ರೂವ್ಡ್ ಪ್ರಾಜೆಕ್ಟ್ ಇದಾವೆ, ಅವರು ಅಲ್ಲಿ ಕಾಮಗಾರಿಯನ್ನು ಮಾಡುವುದಕ್ಕೆ ಬರುವುದಿಲ್ಲ. ಆದರೂ ಅವರು ಕಾಮಗಾರಿಯನ್ನು ಮುಂದುವರಿಸಿದ್ದಾರೆನ್ನುವುದು ಏನಿದೆ ಅದಕ್ಕೆ ನಾವು 17ನೇ ತಾರೀಖಿಗೆ ಆಲ್ ಪಾರ್ಟಿ ಮೀಟಿಂಗ್ ಸೇರಿದಂತಹ ಸಂದರ್ಭದಲ್ಲಿ ನಾವೊಂದು ನಿರ್ಣಯ ಮಾಡಿದ್ದೇವೆ. ತಕ್ಷಣ ಲೀಗಲ್ ಆಕ್ಷನ್, ಕಂಟೆಮ್ಟ್ ಆಫ್ ಕೋರ್ಟ್ ಲೀಗಲ್ ಆಗಿ ಅದರ ಬಗ್ಗೆ ಪ್ರಶ್ನೆ ಮಾಡತಕ್ಕದ್ದು. ನಂತರ ಕಂಟೆಮ್ಟ್ ಆಫ್ ಕೋರ್ಟ್ ಆಗುವುದಿಲ್ಲವೆಂದು ಆಯಿತು. ಆಮೇಲೆ ನೀವು ಒಂದು ಐಐ ಹಾಕಿದಿರಿ. ಜೂನ್ 29ನೇ ತಾರೀಖಿಗೆ ಐಐ ಹಾಕಿದ್ದೀರಿ. ಒಎಸ್ 1:97ರಲ್ಲಿ

ಹಾಕಿದ್ದೀರಿ. ಅದರ ಬದಲಿ ಮೇ ತಿಂಗಳಿನಲ್ಲಿ ನಾವೇನು ಆಲ್ ಪಾರ್ಟಿ ಮೀಟಿಂಗ್‌ನಲ್ಲಿ ಡಿಸಿಷನ್ ತೆಗೆದುಕೊಂಡಿದ್ದೇವೆ ತಕ್ಷಣವೇ ನೀವು ಪ್ರೊಸೆಸ್ ಮಾಡಬಹುದಾಗಿತ್ತು. ಅದು ಆಗಲಿಲ್ಲ. ಅದಕ್ಕಾಗಿ ಇಂತಹ ಒಂದು ಪ್ರಮುಖವಾದ ವಿಷಯಗಳಲ್ಲಿ ಸರ್ಕಾರ ತಕ್ಷಣ ಕ್ರಮವನ್ನು ಕೈಗೊಳ್ಳಬೇಕಾಗುತ್ತದೆಂದು ಹೇಳಲಿಕ್ಕೆ ಇಚ್ಛಿಪಡುತ್ತೇನೆ.

+ ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಸದನದಲ್ಲಿ ಒಂದು ಹೇಳಿಕೆಯನ್ನು ಮಂಡಿಸಿ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಇದರಲ್ಲಿ ಒಂದು ವಿವರಣೆಯನ್ನು ಮಾನ್ಯ ಮಂತ್ರಿಗಳಿಂದ ಕೇಳಲಿಕ್ಕೆ ಬಯಸುತ್ತೇನೆ. ಕೇಂದ್ರಸರ್ಕಾರದ ನೀರಾವರಿ ಮಂತ್ರಿಗಳಾದ ಅರ್ಜುನ್ ಚರಣ್ ಸೇಥಿಯವರು ಮಾನ್ಯ ಮುಖ್ಯಮಂತ್ರಿಗಳಿಗೆ ಬರೆದಿರತಕ್ಕ ಪತ್ರದಲ್ಲಿ ಪ್ಯಾರಾ ಎ, ಬಿ, ಸಿ ಎಲ್ಲವೂ ಸಹಿತ ಶ್ರೀಶೈಲಂ ರೈಟ್‌ಬ್ಯಾಂಕ್ ಚಾನಲ್ ಬಗ್ಗೆ ಹೇಳಿದ್ದಾರೆ. ಆಮೇಲೆ ಪುಲಿಚಿ ಚಿಂತನಾಲಾ, ಭೀಮಾ ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್ ಬಗ್ಗೆ ಸಹ ಹೇಳಿ ಶ್ರೀಶೈಲಂ ಲೆಫ್ಟ್ ಬ್ಯಾಂಕ್ ಚಾನಲ್ ಬಗ್ಗೆ ಏನು ಹೇಳಿದ್ದಾರೆಂದರೆ

"My Ministry has always been advocating that all State Governments should take up only approved projects and should not commit funds to unapproved projects. However, some of the State Governments have been implementing projects without the approval of the Government of India."

The Government of India are indirectly admitting that Andhra Pradesh has been executing projects without the approval of the Union Government ಮಾಡುತ್ತಿದ್ದೇವೆಂದು ಒಪ್ಪಿಗೆಯನ್ನು ಕೊಟ್ಟಾಯಿತು. ಇದು ಆದ ಮೇಲೆ ಸಬ್ಸಿಕ್ವೆಂಟಾಗಿ ಜೂನ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ಪತ್ರವನ್ನು ಕೇಂದ್ರಸರ್ಕಾರದ ನೀರಾವರಿ ಮಂತ್ರಿಗಳಿಗೆ ಬರೆಯುದ್ದಾರೆ.

"I would like to reinterate that the Union Government should issue necessary directions to Government of Andhra Pradesh under Article 256 of the Constitution to stop execution of the said new ongoing projects viz., Telugu-Ganga, SLBC, SRBC, Pulichintala and Bhima Lift Irrigation scheme."

ಈ ಪತ್ರಕ್ಕೆ ಏನೂ ಉತ್ತರ ಬಂದ ಹಾಗೆ ಇಲ್ಲ. ಅದಕ್ಕೆ ನಾವೇನು ಹೇಳುತ್ತೇವೆಂದರೆ ಕೇಂದ್ರಸರ್ಕಾರದ ಮೇಲೆ ನಾವು ಒತ್ತಾಯವನ್ನು ತರಲೇಬೇಕಾಗುತ್ತದೆ. ಈಗ ಕೇಂದ್ರ ಸರ್ಕಾರ ಒಪ್ಪಿಕೊಂಡಿರುವ ಹಾಗೆ, 'ಆಂಧ್ರಪ್ರದೇಶದವರು ಅವರಿಗೆ ಅವಾರ್ಡ್‌ನಲ್ಲಿ

ಆಗಿರತಕ್ಕ ನೀರನ್ನು ಹೆಚ್ಚಿಗೆ ನೀರನ್ನು ಉಪಯೋಗಿಸಿಕೊಳ್ಳಲಿಕ್ಕೆ ಏನೇನು ಬೇಕೋ ಅದಕ್ಕೆ ಅವರು ಕಾಮಗಾರಿಯನ್ನು ಸಿದ್ಧತೆ ಮಾಡಿಕೊಂಡು ಕೇಂದ್ರಸರ್ಕಾರದ ವೇರಿಯಸ್ ಸ್ಟೇಜಸ್ ಅಪ್ರೂವಲ್ ಇಲ್ಲದೆ ಪ್ಲಾನಿಂಗ್ ಕಮೀಷನ್ ಅಪ್ರೂವಲ್ ಇಲ್ಲದೆ ಕೆಲಸಗಳನ್ನು ಮಾಡುತ್ತಿದ್ದಾರೆ. . ಇಂತಹ ಸನ್ನಿವೇಶದಲ್ಲಿ ನಾವು ಸುಮ್ಮನೆ ಕುಳಿತುಕೊಂಡರೆ ಆಗುವುದಿಲ್ಲ. ನಾವು ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ತರಬೇಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಪತ್ರವನ್ನು ಬರೆದಿದ್ದಾರೆ ಅದನ್ನು ನಾನು ಒಪ್ಪುತ್ತೇನೆ. ನನಗನ್ನಿಸುತ್ತದೆ, ಪ್ರಧಾನಮಂತ್ರಿಗಳ ಮೇಲೆ ಇನ್ನೂ ಹೆಚ್ಚು ಒತ್ತಡವನ್ನು ತರುವುದರ ಜೊತೆಗೆ ಮುಖ್ಯ ಮಂತ್ರಿಗಳು ಹೇಳಿರುವ ಹಾಗೆ ಆರ್ಟಿಕಲ್ 256ರಲ್ಲಿ ಡೈರಕ್ಷನ್ ಅನ್ನು ಆಂಧ್ರಪ್ರದೇಶಕ್ಕೆ ಕೊಡಬೇಕೆಂದು ಕೇಳಿದ್ದಾರೆ. ಅದನ್ನು ಕೊಡದಿರುವುದರಿಂದಾಗಿ, ಮುಂದೆ ಕೋರ್ಟ್‌ಗೆ ಹೋಗಬೇಕೆಂದು ಇದ್ದೀರಾ ಅಥವಾ ಸರ್ಕಾರದ ಯೋಚನೆ ಏನೆಂಬುದನ್ನು ದಯಮಾಡಿ ಮಂತ್ರಿಗಳು ತಿಳಿಸಬೇಕು.

ಶ್ರೀ ಜಗದೀಶ್ ಶೆಟ್ಟರ್: ದಿನಾಂಕ 12-7-01 ಅನುಬಂಧ-8, ನಮ್ಮ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಏನು ಪತ್ರವನ್ನು ಬರೆದಿದ್ದಾರೆ, ಕೇಂದ್ರ ಸರ್ಕಾರ, ಸೆಕ್ರೆಟರಿ ಟು ಸೆಂಟ್ರಲ್ ಗೌರ್ನಮೆಂಟ್ ಮಿನಿಸ್ಟ್ರಿ ಆಫ್ ವಾಟರ್ ರಿಸೋರ್ಸಸ್. ಕೆರೆಗಳ ಹೂಳು ತೆಗೆಯುವ ಬಗ್ಗೆ ನಮ್ಮ ರಾಜ್ಯ ಸರ್ಕಾರದಿಂದ ಲೆಟರ್ ಬರೆದಿದ್ದು ಅದಕ್ಕೆ ಏನಾದರೂ ಉತ್ತರ ಬಂದಿದೆಯೋ ಹೇಗೆ?

ಶ್ರೀ ಹೆಚ್.ಕೆ.ಪಾಟೀಲ್: ಮಾನ್ಯ ಅಧ್ಯಕ್ಷರೆ, ಎರಡು ಪ್ರಮುಖವಾದ ವಿಷಯಗಳನ್ನು ಈ ಸಂದರ್ಭದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಮಾನ್ಯ ಸಿಂಧ್ಯಾರವರು ಎತ್ತಿದ್ದಾರೆ. ಮುಖ್ಯವಾಗಿ ವಿರೋಧಪಕ್ಷದ ನಾಯಕರು ಕೇಂದ್ರಸರ್ಕಾರದ ವಾಟರ್ ರಿಸೋರ್ಸಸ್ ಡಿಪಾರ್ಟ್‌ಮೆಂಟ್ ಹಿರಿಯ ಅಧಿಕಾರಿ ಏನು ಸ್ಟೇಟ್‌ಮೆಂಟ್ ಮಾಡಿದ್ದರು ಅದು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಬಂದಾಗ ಅದಕ್ಕೆ ಏಕೆ ಮುಖ್ಯಮಂತ್ರಿಗಳು ಪ್ರತಿಕ್ರಿಯಿಸಬೇಕಾಗಿತ್ತು ಎಂದು ಹೇಳಿ ಪ್ರಶ್ನೆಯನ್ನು ಸರ್ಕಾರದ ಎದುರು ಇಟ್ಟರು, ಇಂಡಿಯನ್ ಎಕ್ಸ್‌ಪ್ರೆಸ್‌ನಂತಹ ಪತ್ರಿಕೆಯಲ್ಲಿ ದೆಹಲಿಯಿಂದ ಬಂದಿರತಕ್ಕ ಒಂದು ಹೇಳಿಕೆಗೆ, ಒಂದು ಪತ್ರಿಕಾ ಹೇಳಿಕೆಯಿಂದ ಕೇಂದ್ರ ಸರ್ಕಾರ ರಾಜ್ಯ ಹಿತವನ್ನು ಕಡೆಗಣಿಸಿದೆ ಅಂದರೆ, ಅದು ಕೇಂದ್ರಸರ್ಕಾರದ ಒಬ್ಬ ಹಿರಿಯ ಅಧಿಕಾರಿಯಿಂದ ಅಧಿಕೃತವಾಗಿ ಬಂದಾಗ ರಾಜ್ಯ ಸರ್ಕಾರ ಸುಮ್ಮನೆ ಕೂಡುವುದಕ್ಕೆ ಆಗುವುದಿಲ್ಲ.

೧.೪೦ ಪಿಎಂ

ರಾಜ್ಯಸರ್ಕಾರ ಕೊಟ್ಟರತಕ್ಕಂಥ ಪ್ರತಿಕ್ರಿಯೆ, ಪ್ರತಿಭಟನೆ ಅತ್ಯಂತ

ಸಮಯೋಚಿತವಾಗಿತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಆ ರೀತಿಯಾಗಿರತಕ್ಕಂಥ ಗಂಭೀರ ಹಾಗೂ ದಿಟ್ಟ ನಿಲುವನ್ನು ತಳೆದರು ಎಂದು ಹೇಳಿದರೆ, ಕೇಂದ್ರಸರ್ಕಾರದಲ್ಲಿ ಈ ಬಗ್ಗೆ ಮರುಚಿಂತನೆ ನಡೆದಿರಲಿಕ್ಕೂ ಸಾಕು. ನಂತರದಲ್ಲಿ ಕೇಂದ್ರಸರ್ಕಾರದ ವಾಟರ್ ರಿಸೋರ್ಸಸ್ ಕಾರ್ಯದರ್ಶಿಗಳು ಆ ಪತ್ರಿಕೆಯಲ್ಲಿ ಬಂದಿರತಕ್ಕದ್ದನ್ನು ಅವರು ನಿರಾಕರಣೆ ಮಾಡಿದ್ದಾರೆ. ಆ ಬಗ್ಗೆ ಏವರವಾಗಿ ಈ ಸಂದರ್ಭದಲ್ಲಿ ಹೋಗುವಂಥಾದ್ದು ಅವಶ್ಯಕತೆ ಇಲ್ಲ. ಆದರೆ ಒಂದು ಮಾತನ್ನು ಮಾನ್ಯ ಜಗದೀಶ ಶೆಟ್ಟರ್ ಅವರು ಹೇಳಿ ಇನ್ನೂ ತೀವ್ರವಾಗಿ ನಾವು ಫೈಲ್ ಮಾಡಬೇಕಾಗಿತ್ತು ಅದನ್ನು ಏಕೆ ಮಾಡಲಿಲ್ಲವೆಂದು ಕೇಳಿದರು. ತಮಗೆ ಗೊತ್ತಿದೆ 17.5.2001ರಂದು ಸರ್ವಪಕ್ಷಗಳ ಸಭೆ ನಡೆಯಿತು. ಆ ಸಭೆಯ ನಂತರ ಎರಡು-ಮೂರು ಡ್ರಾಫ್ಟ್‌ಗಳನ್ನು ಮಾಡಿದರು. ನಂತರ ನಾರಿಮನ್ ಅವರ ಹತ್ತಿರ ಅದರ ಬಗ್ಗೆ ಚರ್ಚೆ ಮಾಡಿದರು. ತದನಂತರ ಇನ್ನೂ ಒಂದು ವಾರ, ಹತ್ತು ದಿವಸ ಮೊದಲು ಫೈಲ್ ಮಾಡಬಹುದಿತ್ತು. ಆದರೆ ತಮಗೆ ಗೊತ್ತಿದೆ - the Supreme Court was on vacation and we have filed this much earlier to the reopening of Supreme Court. The Supreme Court reopened on 9th, if I am correct. We have filed the application on 29th of June. ಅದನ್ನು ತಮ್ಮ ಗಮನಕ್ಕೆ ತರುತ್ತೇನೆ. ತಮಗೆ ಗೊತ್ತಿದೆ ಸುಪ್ರೀಂ ಕೋರ್ಟು ಎಷ್ಟು ಕಾಲ ವೆಕೇಷನ್ ಒಳಗೆ ಇರುತ್ತದೆ ಎಂದು. ಆದ್ದರಿಂದ ಯಾವುದೇ ರೀತಿಯ ವಿಳಂಬವಾಗಿಲ್ಲ ಎಂದು ತಮ್ಮ ಗಮನಕ್ಕೆ ತರುವುದರ ಜೊತೆಗೆ ನಾರಿಮನ್ ಅವರು ಫೈನಲೈಸ್ ಮಾಡಿದ ತಕ್ಷಣವೇ ಈ ಒಂದು ಅಪ್ಲಿಕೇಷನ್‌ನನ್ನು ಫೈಲ್ ಮಾಡಿಯಾಗಿದೆ. ಮತ್ತೊಂದು ಮಾತನ್ನು ಸನ್ಮಾನ್ಯ ಸಿಂಧ್ಯಾರವರು ಪ್ರಸ್ತಾಪ ಮಾಡಿ ಕೇಂದ್ರ ಸಚಿವರು ಬರೆದಿರತಕ್ಕಂಥ ಪತ್ರವನ್ನು ಉಲ್ಲೇಖ ಮಾಡಿ ರಾಜ್ಯ ಸರ್ಕಾರದವರು ಏಕೆ ಸುಮ್ಮನೆ ಕೂಡುತ್ತಿದ್ದೀರಿ? ಯಾವ ರೀತಿಯಾಗಿ ಪ್ರತಿಭಟನೆ ಮಾಡಿದ್ದೀರಿ? ಸುಪ್ರೀಂಕೋರ್ಟಿನಲ್ಲಿ ತಾವು ಏನು ದಾವೆ ಹೂಡಿದ್ದೀರಿ ಆ ಅರ್ಜಿಯಲ್ಲಿ ಆ ಬಗ್ಗೆ ಪ್ರಸ್ತಾಪವನ್ನು ಮಾಡಿದ್ದೀರಾ ಹೇಗೆ ಎಂದು ಕೇಳಿದ್ದಾರೆ. ಸನ್ಮಾನ್ಯ ಅಧ್ಯಕ್ಷರೇ, ನಾವು ಕೇಂದ್ರ ಸರ್ಕಾರಕ್ಕೆ 6.1.2001ರಲ್ಲಿ ಬರೆದಿರತಕ್ಕಂಥ ಪತ್ರ ಹಾಗೂ ಇನ್ನಿತರ ಪತ್ರಗಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಏವರವಾಗಿ ಆಂಧ್ರಪ್ರದೇಶ ಯಾವರೀತಿಯಾಗಿ ಪರ್ಮನೆಂಟ್ ಸ್ಟ್ರಕ್ಚರ್‌ನ್ನು - against the Bachawat Award as well as against the observations made by the Supreme Court ಎನ್ನುವುದನ್ನು ನಾವು ಸ್ಪಷ್ಟಗೊಳಿಸಿದ್ದೇವೆ. ಅಷ್ಟು ಸ್ಪಷ್ಟಗೊಳಿಸಿದರೂ ಅವರು ಪರ್ಮನೆಂಟ್ ಇನ್‌ಫ್ರಾಸ್ಟ್ರಕ್ಚರ್‌ನ್ನು ಕ್ರಿಯೇಟ್ ಮಾಡುತ್ತಿದ್ದಾರೆ ಎನ್ನುವುದನ್ನು ಕೇಂದ್ರಸರ್ಕಾರದ ಗಮನಕ್ಕೆ ತಂದೆವು. ಅವರ ಗಮನಕ್ಕೆ ತಂದಾಗ ನಾವು ಅವರಿಗೆ ಒಂದು ಪ್ರಾರ್ಥನೆಯನ್ನು ಮಾಡಿದ್ದವು ಅದೇನೆಂದರೆ ನೀವು ತಕ್ಷಣ ನಿರ್ದೇಶನ ಕೊಟ್ಟು ಅವರು ನಿಲ್ಲಿಸುವ ಹಾಗೆ ಮಾಡಬೇಕು ಎಂದು. ನಮ್ಮ ಈ

ಪ್ರಾರ್ಥನೆಗೆ ಸನ್ಮಾನ್ಯ ಚರಣಸೇಠಿಯವರು, ವಾಟರ್‌ರಿಸೋರ್ಸಸ್ ಮಂತ್ರಿಗಳು ನಿರ್ದೇಶನ ಕೊಡಬೇಕು, ನೀವು ತಪ್ಪು ಮಾಡುತ್ತಿದ್ದೀರಿ ಎಂದು ಹೇಳಬೇಕು. ನೀವು ನಿಲ್ಲಸದೇಹೋದರೆ ಕ್ರಮ ತಗೆದುಕೊಳ್ಳುತ್ತೇವೆ ಎಂದು ಹೇಳಬೇಕು, ಸುಪ್ರೀಂ ಕೋರ್ಟಿನ ತೀರ್ಪನ್ನು ಗೌರವಿಸಬೇಕೆಂದು ಅವರಿಗೆ ತಿಳಿಸಬೇಕು ಎಂದು ಹೇಳಿದ್ದೆವು. ಆದರೆ ಅದರ ಬದಲಾಗಿ ಸನ್ಮಾನ್ಯ ಚರಣಸೇಠಿಯವರು, ವಾಟರ್‌ರಿಸೋರ್ಸಸ್ ಮಂತ್ರಿಗಳು, ಫೆಬ್ರವರಿ 20ನೇ ತಾರೀಖು 2001ರಲ್ಲಿ ಮುಖ್ಯಮಂತ್ರಿಗಳಿಗೆ ಬರೆದಿರತಕ್ಕಂಥ ಪತ್ರದಲ್ಲಿ ಸನ್ಮಾನ್ಯ ಸಿಂಧ್ಯಾರವರು ಓದಿರತಕ್ಕದ್ದನ್ನು ನಾನು ಪುನಃ ಓದುವುದಕ್ಕೆ ಇಚ್ಛಿಪಡುತ್ತೇನೆ.

"My Ministry has always been advocating that all state governments should take up only approved projects and should not commit funds on unapproved projects. However, some of the state governments have been implementing pojects without approval of the Government of India".

ಸನ್ಮಾನ್ಯ ಅಧ್ಯಕ್ಷರೇ, ಸುಪ್ರೀಂ ಕೋರ್ಟಿನ ಅಬ್ಸರ್ವೇಶನ್‌ಗೆ ವಿರುದ್ಧವಾಗಿರುವುದರ ಬಗ್ಗೆ ನೀವು ನಿರ್ದೇಶನ ಕೊಡಿ ಎಂದು ನಾವು ಕೇಳಿಕೊಂಡಿದ್ದೇವೆ. ಯಾವ ಸುಪ್ರೀಂ ಕೋರ್ಟಿನ ತೀರ್ಪಿನೊಳಗೆ ಕೇಂದ್ರ ಸರ್ಕಾರ ಈ ಬಗ್ಗೆ ನಿಗಾವಹಿಸಬೇಕೆಂದು ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿದೆ, ಅಲ್ಲಿಯೇ ಕೇಂದ್ರಸರ್ಕಾರ ಹೇಳುತ್ತದೆ - "However, some of the state governments are going ahead with the unapproved projects". ಎಂದು ಹೇಳಿದರೆ ನಮ್ಮ ಈ ಫೆಡರಲ್ ಸಿಸ್ಟಮ್ ಏನಿದೆ, ಈ ಫೆಡರಲ್ ಸಿಸ್ಟಮ್‌ನೊಳಗೆ ಯಾರು ಕಾನೂನನ್ನು ಪಾಲನೆ ಮಾಡುತ್ತಾರೆ, ಯಾರು ನಿಯಮಗಳನ್ನು ಪಾಲನೆ ಮಾಡುತ್ತಾರೆ, ಅವರಿಗೆ ಶಿಕ್ಷೆಯಾಗುವ ಹಾಗೆ ಆಗಬಾರದು ಎಂದು ಈ ಸಂದರ್ಭದಲ್ಲಿ ಈ ವೇದಿಕೆ ಮುಖಾಂತರ ನಾನು ಕೇಂದ್ರಸರ್ಕಾರಕ್ಕೆ.....

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ಇದು ಬಹಳ ಪ್ರಮುಖವಾಗಿರತಕ್ಕಂಥ ವಿಚಾರ ಏಕೆಂದರೆ ಕೇಂದ್ರಸರ್ಕಾರದವರು ಒಂದು ರೀತಿಯಲ್ಲಿ ಇದನ್ನು ಒಪ್ಪಿಕೊಂಡ ಹಾಗೆ ಆಗಿದೆ. ಆಂಧ್ರಪ್ರದೇಶ ಎಂದು ಹೇಳಿ ಆ ಪತ್ರ ಮೊದಲನೇ ಮೂರು ಪ್ಯಾರಾಗಳನ್ನು ಓದಿದರೆ ಇದು ಸ್ಪಷ್ಟವಾಗಿ ಕಾಣುತ್ತದೆ. ಏನೆಂದರೆ ಆಂಧ್ರಪ್ರದೇಶಕ್ಕೆ ಸಂಬಂಧಪಟ್ಟದ್ದೇ ಇವರು ಪತ್ರ ಬರೆದಿರತಕ್ಕಂಥಾದ್ದು ಎಂದು. ಮುಖ್ಯಮಂತ್ರಿಗಳ ಪತ್ರಕ್ಕೆ ಅವರು ಹೀಗೆ ಪತ್ರ ಬರೆದಿರತಕ್ಕಂಥಾದ್ದು. ಈಗ ಅವರು ಹೇಳಿದ ಮೇಲೆ ಸಹಿತ ನನಗನ್ನಿಸುತ್ತದೆ, ಏನೆಂದರೆ ನಾವು ವಿಧಾನಸಭೆಯಲ್ಲಿ ಇದನ್ನು ತೀವ್ರವಾಗಿ ಖಂಡಿಸಬೇಕಾಗುತ್ತದೆ. ಇದು ಪ್ರಧಾನಿಯವರ ಗಮನಕ್ಕೆ

ಬಂದಿದೆಯೋ ಇಲ್ಲವೋ ನನಗಂತೂ ಗೊತ್ತಿಲ್ಲ. ಏಕೆಂದರೆ ನಮ್ಮ ಅನುಭವ ಏನೆಂದರೆ, ನೀರಾವರಿ ಇಲಾಖೆಯಲ್ಲಿರತಕ್ಕಂಥ ಲಾಬಿಗಳು ಅಲ್ಲಿ ಕೆಲಸ ಮಾಡಿ ನಮ್ಮ ರಾಜ್ಯದ ಕಾವೇರಿ ಏಚಾರ ಇರಬಹುದು, ಕೃಷ್ಣಾ ಏಚಾರ ಇರಬಹುದು, ಮತ್ತೊಂದು ಏಚಾರ ಇರಬಹುದು ಎಲ್ಲ ಕಡೆಗಳಲ್ಲೂ ಸಹಿತ ಕರ್ನಾಟಕ ಎಂದರೆ ನಾವು ಏನೋ ಒಂದು ದೊಡ್ಡ ಅಪರಾಧ ಮಾಡಿದ್ದೇವೆ ಎಂದು ಅಪರಾಧಿ ಸ್ಥಾನದಲ್ಲಿ ಕೂಡಿಸತಕ್ಕಂಥ ಕೆಲಸವನ್ನು ಮುಂಚಿನಿಂದ ಮಾಡಿಕೊಂಡು ಬಂದಿದ್ದಾರೆ. ಇದಕ್ಕೆ ಒಂದು ತೀವ್ರವಾದ ಪ್ರತಿಭಟನೆಯನ್ನು ರಾಜ್ಯದಲ್ಲಿ ನಾವು ಮಾಡಬೇಕಾಗುತ್ತದೆ. ಹಾಗೆಯೇ ಈ ಏಧಾನಸಭೆಯಲ್ಲೂ ಸಹಿತ ಮಾಡಬೇಕಾಗುತ್ತಿದೆ. ಏಕೆಂದರೆ ಇದು ನಮ್ಮ ರಾಜ್ಯದ ಮುಂದಿನ ಭವಿಷ್ಯದ ಏಚಾರವಾಗಿದೆ. ಈಗ ನಾವು ಕೋರ್ಟಿಗೆ ಏನು ಹೋಗಿದ್ದೇವೆ, ಅದು ಮುಂದೆ ಏನು ಆಗುತ್ತದೆ ಎನ್ನುವುದನ್ನು ಕಾದು ನೋಡೋಣ. ಆದರೆ ಕೇಂದ್ರ ಸರ್ಕಾರ ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಇವತ್ತು ಸರ್ಕಾರಕ್ಕೆ ಶಕ್ತಿಯನ್ನು ಹೆಚ್ಚು ಮಾಡುವ ದೃಷ್ಟಿಯಿಂದ ಇದನ್ನು ಖಂಡಿಸಿ ಒಂದು ನಿರ್ಣಯವನ್ನು ಏಕೆ ಮಾಡಬಾರದು ಎನ್ನತಕ್ಕಂಥಾದ್ದನ್ನು ಸಹಿತ ನಾನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಈಗ ಭಾರತೀಯ ಜನತಾಪಾರ್ಟಿಯ ಮಾನ್ಯ ಅಧ್ಯಕ್ಷರಾದ ಶ್ರೀ ಸೇಡಮ್ ಅವರು ಪ್ರಧಾನಿಗಳು ಮಹಾರಾಷ್ಟ್ರದ ಮುಖ್ಯಮಂತ್ರಿಗಳನ್ನು, ಮತ್ತು ಕರ್ನಾಟಕ ಮುಖ್ಯಮಂತ್ರಿಗಳನ್ನು ಗಡಿಪ್ರದೇಶ ಏಚಾರದಲ್ಲಿ ಮಾತನಾಡುವುದಕ್ಕೆ ಕರೆದಿದ್ದಾರೆ ಎಂದು ಹೇಳಿದರು. ನಮ್ಮ ಮುಖ್ಯಮಂತ್ರಿಗಳು ತಕ್ಷಣ 'ಆಯಿತು, ನಾನು ಬರುತ್ತೇನೆ' ಎನ್ನತಕ್ಕಂಥ ಮಾತನ್ನು ಹೇಳಿದರು. ಆದರೆ ಭಾರತೀಯ ಜನತಾಪಾರ್ಟಿಯವರು, ಯಾವ ಪಾರ್ಟಿಯವರು ಈ ದೇಶವನ್ನು ಆಳುತ್ತಿದ್ದಾರೆ, ಅವರ ಪಾರ್ಟಿ ಅಧ್ಯಕ್ಷರು ಹೇಳಿದರು, ಏನೆಂದರೆ ಇಲ್ಲ ಇದು ಒಪ್ಪಿಕೊಂಡಿರತಕ್ಕಂಥಾದ್ದು ಸರಿಯಲ್ಲವೆಂದು ಹೇಳಿ. ಆದ್ದರಿಂದ ಇದು ಅವರಿಗೆ ಕೂಡ ಯಾವುದೇ ರೀತಿಯಿಂದ ಇಕ್ಕಟ್ಟು ಆಗುವುದಿಲ್ಲ. ಸರ್ವಾನುಮತದಿಂದ ಈ ಸಭೆ ಇದನ್ನು ಖಂಡಿಸಿ ಕೇಂದ್ರಸರ್ಕಾರದ ಕ್ರಮ, ಕೇಂದ್ರಸರ್ಕಾರದ ಬಿಗಿ ನಿಲುವು, ಆಂಧ್ರದ ಬಗ್ಗೆ ಇರತಕ್ಕಂಥ ಸಡಿಲವಾದ ನಿಲುವು, ನಮ್ಮ ಮನವಿಯನ್ನು ತಿರಸ್ಕಾರ ಮಾಡಿರತಕ್ಕಂಥಾದ್ದು, ನಮ್ಮ ಮಾತಿಗೆ ಬೆಲೆ ಸಿಗದೇ ಇರತಕ್ಕದ್ದು ಸರಿಯಲ್ಲ ಎಂದು ಹೇಳಿ ಇದನ್ನು ನಾವು ಖಂಡಿಸಬೇಕಾಗುತ್ತದೆ. ಒಂದು ಕಡೆ ಆಂಧ್ರಪ್ರದೇಶದವರು ಮಾಡಿಕೊಂಡು ಹೋಗುತ್ತಿದ್ದಾರೆ. ಇನ್ನೊಂದು ಕಡೆ ಕೇಂದ್ರಸರ್ಕಾರದವರು ತಪ್ಪಗೆ ಕುಳಿತುಕೊಂಡು ಇದಕ್ಕೆ ಒಪ್ಪಿಗೆ ಕೊಡುತ್ತಿದ್ದಾರೆ ಎಂದು ಹೇಳಿದರೆ ನಾವು ಏಧಾನಸಭೆ ನಡೆಸಿ ಏನು ಉಪಯೋಗ? ಆದ್ದರಿಂದ ಮಾನ್ಯ ಅಧ್ಯಕ್ಷರೆ, ಸರ್ಕಾರದವರು, ಮಾನ್ಯ ಕಾನೂನು ಮಂತ್ರಿಗಳು ಈ ದೃಷ್ಟಿಯಲ್ಲಿ ಏಚಾರ ಮಾಡಿ ಒಂದು ನಿರ್ಣಯವನ್ನು ಮಂಡಿಸಬೇಕು. ಏಕೆಂದರೆ ಕಾಲುವೆ ಏಚಾರದಲ್ಲಿ ನಾಳೆ ಹೇಳಿಕೆ ಕೊಡುತ್ತೇನೆ ಎಂದು ಹೇಳಿದ್ದಾರೆ. ಆದರೆ ತಮಗೆ ಗೊತ್ತಿದೆ, ನಾವು ಎಲ್ಲಾ ಹೋಗಿ ನೋಡಿಕೊಂಡು

ಬಂದಿದ್ದೇವೆ. ಮಾನ್ಯ ಜಯಚಂದ್ರ ಅವರು ಬಹಳ ದಿವಸ ಆದ ಮೇಲೆ ಹೋಗಿ ನೋಡಿಕೊಂಡು ಬಂದರು. ಅಧ್ಯಕ್ಷರೇ, ತಮಗೆ ಹೇಳಬೇಕು ಎಂದರೆ ಅದು ಸುಮಾರು ಎರಡು-ಮೂರು ಎಕರೆಯಷ್ಟು ನೀರು ನಿಂತಿರತಕ್ಕದ್ದು. ಆದರೆ ಮೇಲ್ಗಡೆಯಿಂದ ಬರತಕ್ಕಂಥ ಎಲ್ಲಾ ನೀರು ಸಹಿತ ದೊಡ್ಡ ಕೆರೆಗೆ ತೆಗೆದುಕೊಂಡು ಹೋಗಬೇಕು ಎಂದು ಹೇಳಿಬಿಟ್ಟು ನಮ್ಮ ಹೇಮಾವತಿ ಟನಲ್‌ನಲ್ಲಿ 10 ಟಿ.ಎಂ.ಸಿ. ನೀರು ಹೋಗುವುದಕ್ಕೆ ಅಷ್ಟೊಂದು ದೊಡ್ಡ.....

ಅಧ್ಯಕ್ಷರು: ಅವರು ಸ್ಟೇಟ್‌ಮೆಂಟ್ ಕೊಡಲಿ.

ಶ್ರೀ ಪಿ.ಜಿ.ಆರ್.ಸಿ,ಧ್ಯಾ: ಚಾನಲ್‌ನ್ನು ಅವರು ಮಾಡಿಕೊಂಡಿದ್ದಾರೆ. ಇದನ್ನು ನಾವು ಖಂಡಿಸಬೇಕಾಗುತ್ತದೆ. ಆಂಧ್ರಸರ್ಕಾರ ಮಾಡುತ್ತಾ ಇರತಕ್ಕಂಥಾದ್ದು ತಪ್ಪು ಆಂಧ್ರದ ಬಗ್ಗೆ ಕೇಂದ್ರ ಸರ್ಕಾರದ ಸಡಿಲ ನಿಲುವಿನ ಬಗ್ಗೆ, ಏಕೆಂದರೆ ಆಂಧ್ರದ ಬಗ್ಗೆ ಅದು ಮೃದು ಧೋರಣೆಯನ್ನು ತಾಳಿದೆ. ಅದನ್ನು ನಾವು ಖಂಡಿಸಬೇಕಾಗುತ್ತದೆ. ಕೇಂದ್ರ ಸರ್ಕಾರಕ್ಕೆ ಆಗ್ರಹ ಪಡಿಸಬೇಕಾಗುತ್ತದೆ. ಆಂಧ್ರಪ್ರದೇಶದಲ್ಲಿ ಕಾನೂನು ಬಾಹಿರವಾಗಿ, ಸಂವಿಧಾನ ಬಾಹಿರವಾಗಿ ಅದು ಕೋರ್ಟ್‌ನಲ್ಲಿ ಇರತಕ್ಕಂಥ ಸಂದರ್ಭದಲ್ಲಿ ಕಾಮಗಾರಿಗಳನ್ನು ನಡೆಸುತ್ತಾ ಇರತಕ್ಕಂಥಾದ್ದು ತಪ್ಪು ಎಂದು ಈ ಒಂದು ಸದನದಲ್ಲಿ ನಿರ್ಣಯ ಆಗಬೇಕು ಎನ್ನತಕ್ಕದ್ದು ನನ್ನ ಆಗ್ರಹ ಸ್ವಾಮಿ.

ಅಧ್ಯಕ್ಷರು: ವಿಧಾನಪರಿಷತ್ತಿನಲ್ಲಿ ಕಾನ್‌ಫರೆನ್ಸ್ ಹಾಲ್‌ನಲ್ಲಿ ಒಂದೂವರೆ ಗಂಟೆಗೆ ಸದಸ್ಯರಿಗೆ ಊಟಕ್ಕೆ ಇಟ್ಟುಕೊಂಡಿದ್ದಾರೆ.

ಶ್ರೀ ಹೆಚ್.ಕೆ.ಪಾಟೀಲ್:ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಉತ್ತರ ಹೇಳಿದೆ. ಸನ್ಮಾನ್ಯ ಸಿಂಧ್ಯಾರವರು ರಾಜ್ಯದ ಹಿತದೃಷ್ಟಿಯಿಂದ ಒಂದು ವಿಧಾನಸಭೆಯ ಠರಾವನ್ನು ಏಕೆ ಮಾಡಬಾರದು ಎನ್ನುವ ಸೂಚನೆಯನ್ನು ಮಾಡುವುದರ ಜೊತೆಗೆ ಕೇಂದ್ರ ಸರ್ಕಾರ ಏನು ಕೆಲವು ವಿಚಾರಗಳನ್ನು ಲಘುವಾಗಿ ಪರಿಗಣಿಸಿ ಈ ರೀತಿಯಾಗಿರತಕ್ಕಂಥ ರೀತಿಯಲ್ಲಿ ಆಂಧ್ರ ಪ್ರದೇಶ ತೆಗೆದುಕೊಂಡಿರತಕ್ಕಂಥ ಕಾಮಗಾರಿಗಳ ಬಗ್ಗೆ ಕಣ್ಣುಮುಚ್ಚಿ ಕುಳಿತುಕೊಳ್ಳತಕ್ಕಂಥ ನಿಲುವನ್ನು ಏನು ತಾಳಿದೆ ಇದು ಖಂಡನೀಯ ಎನ್ನುವ ಮಾತನ್ನು ಮಾನ್ಯ ಸಿಂಧ್ಯಾರವರು ಪ್ರಸ್ತಾಪ ಮಾಡಿದ್ದಾರೆ. ಈ ವೇದಿಕೆ ಮುಖಾಂತರ ನಾನು ಪ್ರಾರ್ಥನೆಯನ್ನು ಕೇಂದ್ರ ಸರ್ಕಾರಕ್ಕೆ ಮಾಡುತ್ತಿದ್ದೇನೆ. ಈ ನಮ್ಮ ಫೆಡರಲ್ ವ್ಯವಸ್ಥೆಯನ್ನು ಶಕ್ತಿಯುತ ಮಾಡಬೇಕು ಎಂದರೆ ಸಂವಿಧಾನ ರಕ್ಷಣೆಯ ಜೊತೆಗೆ ಯಾರು ನಿಯಮ ಪಾಲನೆ ಮಾಡುತ್ತಾರೆ, ಯಾರು ಟ್ರಬ್ಯುನಲ್ ಅಥವಾ ತೀರ್ಪುಗಳಿಗೆ ಮನ್ನಣೆ ಕೊಡುತ್ತಾರೆ ಅವರಿಗೆ ಗೌರವ ಸಿಗುವುದರ ಜೊತೆಗೆ ಯಾರು ತೀರ್ಪುಗಳನ್ನು ಅಥವಾ ಟ್ರಿಬ್ಯುನಲ್ ವರದಿಗಳನ್ನು ಅಗೌರವಿಸುತ್ತಾರೆ, ಅವರಿಗೆ ಕಾನೂನಾತ್ಮಕವಾಗಿ

ಏನು ಶಕ್ತಿ ಇದೆಯೋ ಅದನ್ನು ಉಪಯೋಗ ಮಾಡಿ ನಿರ್ದೇಶನಗಳನ್ನು ಕೊಡತಕ್ಕಂಥಾದ್ದು ಕೇಂದ್ರ ಸರ್ಕಾರದ ಕರ್ತವ್ಯವಾಗುತ್ತದೆ. ಆದ್ದರಿಂದ, ಅಂತಹ ಕರ್ತವ್ಯವನ್ನು ನಿಭಾಯಿಸಬೇಕೆನ್ನುವ ಉದ್ದೇಶದಿಂದ ಪತ್ರಿಕೆಗಳ ಮುಖೇನ ನಾವು ವ್ಯಕ್ತ ಮಾಡಿದೆವು. ಯಾವಾಗ ಆ ನಮ್ಮ ಪ್ರಯತ್ನ ಸಫಲವಾಗಲಿಲ್ಲವೋ, ಯಾವಾಗ ನಮ್ಮ ಮನವಿಯನ್ನು ಕೇಂದ್ರ ಸರ್ಕಾರ ಪುರಸ್ಕರಿಸಲಿಲ್ಲವೋ.....

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಮಾತನ್ನು ಹೇಳಿದರು. ಸರ್ವಪಕ್ಷಗಳ ಸಭೆಯನ್ನು ತಾವು ಕರೆಸಿದ್ದೀರಿ. ಕರ್ನಾಟಕದ ಪರವಾಗಿ ಕೇಂದ್ರದಲ್ಲಿ ಅಂದರೆ ಡೆಲ್ಲಿಯಲ್ಲಿ ಯಾರು ಯಾರು ವಕೀಲರು ಇದ್ದಾರೆ, ಅವರನ್ನೆಲ್ಲಾ ಕರೆಸಿದ್ದೀರಿ. ಮತ್ತೆ ರಾಜ್ಯದ ತಜ್ಞರುಗಳನ್ನೂ ಸಹಿತ ಕರೆಸಿದ್ದೀರಿ. ನಿವೃತ್ತ ನ್ಯಾಯಾಧೀಶರನ್ನೂ ಕರೆಸಿದ್ದೀರಿ. ಅವತ್ತು ತಕ್ಷಣ ಇದಾಗಬೇಕೆಂಬುದರ ಬಗ್ಗೆ ತಾವು ತಡ ಮಾಡಿದಿರಿ. ಈ ರೀತಿ ತಡವಾದ ಮೇಲೆ, ಮತ್ತೊಂದು ಬಹಳ ಪ್ರಮುಖವಾದಂಥ ವಿಚಾರ. ಕಂಟೆಂಪ್ಟ್ ಕೇಸನ್ನು ಹಾಕಬೇಕೆಂಬ ಪ್ರಶ್ನೆ ಬಂತು. ಇದುವರೆಗೂ ಸಹಿತ ನೀವು ಅದನ್ನು ಮಾಡಿಲ್ಲ. ನ್ಯಾಯಾಲಯದ ನಿಂದನೆ ಆಗಿದೆ ಎನ್ನತಕ್ಕಂಥ ವಿಚಾರ ಮಾಡಬೇಕೆಂದು ಹೇಳಿ. ತಮಗೆ ಗೊತ್ತಿರಬಹುದು. ನಮ್ಮ ಕಾನೂನು ತಜ್ಞರುಗಳು ಏನೇ ಇರಲಿ, ಅವರು ಏನೇ ಹೇಳಿರಲಿ, ಆದರೆ, ಅವತ್ತು ತೀರ್ಮಾನವಾಗಿದ್ದು ಏನು? That was the consensus of the meeting. ಅದನ್ನು ನೀವು ಏಕೆ ಮಾಡಿಲ್ಲ? ಅದಕ್ಕೋಸ್ಕರವೇ ನಾನು ಹೇಳಿದ್ದು, ಮುಖ್ಯಮಂತ್ರಿಗಳ ಪತ್ರಕ್ಕೆ ಗೌರವ ಸಿಕ್ಕಿಲ್ಲ ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ ಎಂದರೆ, ಹೇಗೆ ಅದರ ಬಿಸಿ ತಾಕುತ್ತದೆ? ನಮ್ಮ ಲೋಕಸಭಾ ಸದಸ್ಯರು ಇದುವರೆಗೂ ಸಹಿತ ಇದರ ಬಗ್ಗೆ ಧ್ವನಿ ಎತ್ತಿಲ್ಲ. ಇದು ಬಹಳ ದುಃಖದ ವಿಚಾರ. ಲೋಕಸಭೆ ಪ್ರಾರಂಭವಾಗಿ ಎಷ್ಟು ದಿನವಾಯಿತು? ನಾವು ಹೇಳಬಾರದೆಂದಿದ್ದರೂ, ಇಲ್ಲಿ ಹೇಳುತ್ತೇವೆ. ಇವತ್ತು ಏಕೆ ಲೋಕಸಭಾ ಮತ್ತು ರಾಜ್ಯ ಸಭಾ ಸದಸ್ಯರು ಇದುವರೆಗೂ ಆ ಪ್ರಶ್ನೆ ಮಾಡಿಲ್ಲ. ಇದುವರೆಗೂ ಸಹಿತ ಇದನ್ನು ಕೇಳಿಲ್ಲ. ಅದರಿಂದಾಗಿ ನಾನು ಈ ಸದನದಲ್ಲಿ ಕೇಂದ್ರಸರ್ಕಾರ ಮತ್ತು ಆಂಧ್ರಸರ್ಕಾರದ ವಿಚಾರದಲ್ಲಿ ಖಂಡನಾತ್ಮಕವಾದ ನಿರ್ಣಯವಾಗಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯಾರವರು ಕೆಲವೊಂದು ವಿಚಾರಗಳನ್ನು ವ್ಯಕ್ತಪಡಿಸಿದರು. ಕೇಂದ್ರ ಸರ್ಕಾರದ ಕಾರ್ಯದರ್ಶಿಗಳು ಬರೆದ ಪತ್ರ ಮತ್ತು ಅದರಲ್ಲಿದ್ದ ವಿಷಯಗಳ ಬಗ್ಗೆ ಬಹುಶಃ ಸರ್ವಪಕ್ಷಗಳ ಸಭೆಯಲ್ಲಿ ನಾವೆಲ್ಲಾ ನಾಯಕರು ಏನು ಕೂಡಿದ್ದೆವು ಆ ಸಂದರ್ಭದಲ್ಲಿ ಆ ಪತ್ರದ ಬಗ್ಗೆಯೂ

ಚರ್ಚೆಯಾಗಿದೆ. ಅದರ ಪರಿಣಾಮವನ್ನೆಲ್ಲಾ ವಿಚಾರ ಮಾಡಿಕೊಂಡು ಕೂಡಲೇ ಸುಪ್ರೀಂ ಕೋರ್ಟಿಗೆ ನೀವು ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಬೇಕೆಂಬುದನ್ನು ನಾವು ವ್ಯಕ್ತಪಡಿಸಿದ್ದೆವು. ಅದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಅದಕ್ಕೆ ನಾನು ಹೇಳುವಂಥಾದ್ದು ಇವತ್ತು ಕೇಂದ್ರ ಸರ್ಕಾರ ಯಾವ ಯಾವ ಸಂದರ್ಭದಲ್ಲಿ ಹಿಂದಕ್ಕೆ ಸುಪ್ರೀಂ ಕೋರ್ಟಿನಲ್ಲಿ ಆಲಮಟ್ಟಿ ಅಣೆಕಟ್ಟಿನ ಬಗ್ಗೆ 519 ಅಡಿ ಎತ್ತರ ಮಾಡುವವರೆಗೆ ಮಾಡುವಂಥಾದ್ದು ಇರಬಹುದು ಅಥವಾ ಬೇರೆ ಬೇರೆ ಸಂದರ್ಭದಲ್ಲಿ ಯಾವ ರೀತಿಯಾಗಿ ನಿಷ್ಪಕ್ಷಪಾತವಾಗಿ ನಡೆದುಕೊಂಡಿದೆ ಎಂಬುದು ನಮಗೆ ಗೊತ್ತಿದೆ. ಹೀಗಾಗಿ ಕೇಂದ್ರ ಸರ್ಕಾರ ಯಾವುದೇ ರೀತಿಯಲ್ಲಿ ಮಲತಾಯಿಧೋರಣೆ ಮಾಡಿದರೆ ನಾವೂ ಖಂಡಿಸೋಣ. ಅದಕ್ಕೆ ನಾವು ಹೊರತಾಗಿಲ್ಲ. ಏಕೆಂದರೆ, ನಮ್ಮ ರಾಜ್ಯದ ಹಿತಾಸಕ್ತಿ ಮುಖ್ಯ. ಆದರೆ, ಯಾವ ಸಂದರ್ಭದಲ್ಲಿ ಮಾಡಬೇಕಾಗುತ್ತದೆ ಮತ್ತು ಕೂಡಲೇ ಏನು ಕಾನೂನು ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆಂಬುದನ್ನು ಇವತ್ತು ಮಾಡಬೇಕಾಗುತ್ತದೆ. ಅದರ ಸಲುವಾಗಿ ಸುಪ್ರೀಂ ಕೋರ್ಟಿನಲ್ಲಿ ತಾವೇನು ಐ.ಎ. ಹಾಕಿದ್ದೀರಿ, ಅದರಲ್ಲಿ ಇಂಟೀರಿಯಂ ಆರ್ಡರ್ ಸಲುವಾಗಿ ರಿಕ್ವೆಸ್ಟ್ ಮಾಡಿಕೊಂಡಿದ್ದೀರಿ. ಅದೇನು ಹಿಯರಿಂಗ್ ನಡೆಯುತ್ತಾ ಇದೆಯೋ ಅಥವಾ ಏನಾದರೂ ಆರ್ಡರ್ ಆಗಿದೆಯೋ ಅಥವಾ ಹಿಯರಿಂಗ್ ಫಿಕ್ಸ್ ಆಗಿದೆಯೋ ಅದರ ಬಗ್ಗೆಯೂ ಸ್ಪಷ್ಟೀಕರಣ ನೀಡಬೇಕು. ಚೀಫ್ ಸೆಕ್ರಟರಿಯವರು ಬರೆದಿರುವ ಪತ್ರಕ್ಕೆ ಉತ್ತರ ಸಿಕ್ಕಿದೆಯೇ ಎನ್ನುವಂಥಾದ್ದಕ್ಕೂ ಸಹ ಸ್ಪಷ್ಟೀಕರಣವನ್ನು ನೀಡಬೇಕು.

ಶ್ರೀ ಕೆ.ಬಿ.ಕೋಳಿವಾಡ(ರಾಣಿಬೆನ್ನೂರು): ಕಾನೂನು ರೀತ್ಯ ಕ್ರಮಗಳನ್ನು ರಾಜ್ಯಸರ್ಕಾರ ತೆಗೆದುಕೊಳ್ಳುತ್ತಾ ಇದೆ. ಚಾಚೂ ತಪ್ಪದೆ ಕ್ರಮವನ್ನು ಕಾನೂನು ರೀತಿ ತೆಗೆದುಕೊಳ್ಳುತ್ತಿದೆ. ಮಾನ್ಯ ಸಿಂಧ್ಯರವರು ಕೆಲವೊಂದು ವಿಷಯವನ್ನು ಏನು ಮಂಡನೆ ಮಾಡಿದರು, ರಾಜ್ಯದ ಮುಖ್ಯಮಂತ್ರಿಯೊಬ್ಬರು ದೇಶದ ಪ್ರಧಾನ ಮಂತ್ರಿಯವರಿಗೆ ಪತ್ರವನ್ನು ಬರೆದರೆ, ಎಷ್ಟು ಲಘುವಾಗಿ ಇದನ್ನು ತೆಗೆದುಕೊಂಡಿದ್ದಾರೆ ಎಂದರೆ, ಹಾಗೆಯೇ ಅದನ್ನು ನೀರಾವರಿ ಸಚಿವರಿಗೆ ಕಳುಸಿ ಕೊಟ್ಟಿದ್ದಾರೆ. ಇರಿಗೇಷನ್ ಮಂತ್ರಿಗಳೇನು ಮುಖ್ಯಮಂತ್ರಿಗಳಿಗೆ ಪತ್ರ ಬರೆಯುತ್ತಾರೆಂದರೆ, ಪ್ರಧಾನ ಮಂತ್ರಿಗಳಿಗೆ ಅಡ್ರಸ್ ಮಾಡಿ, ಪತ್ರವನ್ನು ಉಲ್ಲೇಖ ಮಾಡುತ್ತಾರೆ. ಒಂದು ರಾಜ್ಯದ ಮುಖ್ಯಮಂತ್ರಿಗೆ, ಕೇಂದ್ರದ ಪ್ರಧಾನ ಮಂತ್ರಿಯವರು ಕೊಡತಕ್ಕಂಥ ಗೌರವವನ್ನು ನೋಡಿದರೆ, ಇದು ನನಗೆ ಬಹಳ ವಿಷಾದನೀಯ ಎನ್ನಿಸುತ್ತಿದೆ. ಈ ರೀತಿಯಾಗಬಾರದು. ಕೆಲವೊಂದು ವಿಷಯಗಳ ಬಗ್ಗೆ ಕೇಂದ್ರ ಸರ್ಕಾರವು ಸಹಕರಿಸಿದ್ದಕ್ಕೆ ನಾವು ಅಭಿನಂದನೆಗಳನ್ನು ಸಲ್ಲಿಸೋಣ. ಆದರೆ, ಮಾಡಿದಂಥ ಈ ತಪ್ಪುಗಳ ಬಗ್ಗೆ ನಾವು ಖಂಡನೆ ಮಾಡಲೇಬೇಕಾಗುತ್ತದೆ. ಇದು ಖಂಡನೀಯ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಸ್ಪಷ್ಟಪಡಿಸುವುದಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಕೆ.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸಿಂಧ್ಯರವರಿಗೆ ಇಷ್ಟು ಮಾತ್ರ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಅವರು ಕಂಟೆಂಪ್ಟ್ ಏಕೆ ಮಾಡಲಿಲ್ಲವೆಂದು ಹೇಳಿದರು. ಸರ್ವಪಕ್ಷಗಳ ಸಭೆಯ ನಂತರ, ತಾವು ಹೇಳಿದ ಹಾಗೆಯೇ ಸನ್ಮಾನ್ಯ ಬಾಲಕೃಷ್ಣರವರು ಕಂಟೆಂಪ್ಟ್ ಅಪ್ಲಿಕೇಷನ್ ಮೂವ್ ಮಾಡಿ ಎಂದು ಸಲಹೆ ಮಾಡಿದರು. ಅದಾದ ಮೇಲೆ ನಾವು ಎಲ್ಲಾ ವಕೀಲರ ಜೊತೆಯಲ್ಲಿ ಚರ್ಚೆ ಮಾಡಿದೆವು. ಸನ್ಮಾನ್ಯ ಬಾಲಕೃಷ್ಣರವರ ಜೊತೆಯಲ್ಲಿಯೂ ಚರ್ಚೆ ಮಾಡಿದೆವು. ನಂತರ ಕಾನೂನಾತ್ಮಕವಾಗಿ ಯಾವುದು ಸಮಂಜಸವೋ, ರಾಜ್ಯದ ಹಿತದೃಷ್ಟಿಯಿಂದ ಯಾವುದು ಸರಿ ಎನ್ನುವುದನ್ನು ನಾವು ಮಾಡಿದೆವು. "However, some States are going ahead with unapproved projects"- ಎಂದು ತಾವೇನು ಉಲ್ಲೇಖ ಮಾಡಿ ಮಾತನಾಡಿದಿರಿ, ಈ ರೀತಿಯಾಗಿ ಅವರು ನಿಲುವು ತೆಗೆದುಕೊಂಡ ಮೇಲೆ, ರಾಜ್ಯಸರ್ಕಾರ ಅತ್ಯಂತ ಕಳಕಳಿಯಿಂದ ಕೇಂದ್ರಸರ್ಕಾರಕ್ಕೆ ಪತ್ರ ಬರೆದಿದೆ. ಸನ್ಮಾನ್ಯ ಶೆಟ್ಟರ್‌ರವರು ಹೇಳಿದ ಹಾಗೆ, ಕೇಂದ್ರಸರ್ಕಾರ ತಕ್ಷಣ ಸ್ಪಂದಿಸಿ, ನಾವು ಮಾಡಿರತಕ್ಕ ದೂರಿಗೆ ಅವರು ನೇರವಾಗಿ ಸರ್ಕಾರಕ್ಕೆ ನಿರ್ದೇಶನ ಕೊಟ್ಟಿದ್ದರೆ, ನಾವು ಸುಪ್ರೀಂ ಕೋರ್ಟಿಗೆ ಹೋಗತಕ್ಕ ಅಗತ್ಯವೇ ಬೀಳುತ್ತಿರಲಿಲ್ಲ. ಯಾವಾಗ ಕೇಂದ್ರ ಸರ್ಕಾರದವರು ಅನ್-ಅಪ್ರೂವ್ಡ್ ಪ್ರಾಜೆಕ್ಟ್‌ಗಳನ್ನು ಕೆಲವು ರಾಜ್ಯಗಳು ಮಾಡಿಕೊಂಡು ಹೊರಟವೆ ಎಂದು ಲೋಕಾರೂಢಿಯ ಮಾತಿನಲ್ಲಿ ಹೇಳಿದಾಗ, ನಮಗೆ ಕೇಂದ್ರ ಸರ್ಕಾರ ನ್ಯಾಯವನ್ನು ಕೊಡದೇ ಇದ್ದಾಗ, ಉಳಿದಿರತಕ್ಕಂಥಾದ್ದು ಒಂದೇ ಒಂದು ದಾರಿ, ಅದು ಸುಪ್ರೀಂ ಕೋರ್ಟಿಗೆ ಹೋಗಬೇಕಾದಂಥಾದ್ದು. ಆದ್ದರಿಂದ, ನಮ್ಮ ರಾಜ್ಯದಲ್ಲಿ ಯಾವುದೇ ಸಂದರ್ಭದಲ್ಲಿ ಅದು ಜಲವಿವಾದ ಇರಲಿ, ಗಡಿ ವಿವಾದ ಇರಲಿ, ಭಾಷೆಗೆ ಸಂಬಂಧಪಟ್ಟ ವಿಷಯಗಳು ಇರಲಿ, ನಾವೆಲ್ಲರೂ ಜೊತೆಯಾಗಿ ಹೋರಾಟ ಮಾಡುತ್ತಿದ್ದೇವೆ. ಪಕ್ಷ ಪಂಗಡ, ಭೇದಗಳನ್ನು ಮರೆತು, ನಾವು ಒಟ್ಟಾಗಿ ಹೋರಾಟ ಮಾಡತಕ್ಕಂಥ ನಿಲುವು ಏನು ನಮ್ಮ ರಾಜ್ಯದಲ್ಲಿ ಹಾಕಿಕೊಂಡಿದ್ದೇವೆ, ಆ ನೀಲುವಿನ ಅನ್ವಯ ನಾವು ಇವತ್ತು ಸುಪ್ರೀಂಕೋರ್ಟಿಗೆ ದಾವೆ ಮಾಡಬೇಕಾದ ಪ್ರಸಂಗ ಬಂತು. ಕೇಂದ್ರಸರ್ಕಾರದಿಂದ ತಕ್ಷಣ ನಮಗೆ ನ್ಯಾಯ ಸಿಕ್ಕಿದ್ದರೆ, ಇದನ್ನು ಮಾಡತಕ್ಕಂಥ ಅವಶ್ಯಕತೆ ಇರಲಿಲ್ಲ. ಸನ್ಮಾನ್ಯ ಕೋಳಿವಾಡ್‌ರವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಸನ್ಮಾನ್ಯ ಮುಖ್ಯಮಂತ್ರಿಗಳು ಬರೆದಿರತಕ್ಕಂಥ ಅತ್ಯಂತ ಮಹತ್ವದ ಪತ್ರಕ್ಕೆ ಉತ್ತರ ಬರಲಿಲ್ಲ. ಜನವರಿ 4ಕ್ಕೆ ಮುಖ್ಯಮಂತ್ರಿಗಳು ಪತ್ರ ಬರೆದರು. ಅದರಲ್ಲಿ ಆಂಧ್ರಪ್ರದೇಶ ಯಾವ ರೀತಿಯಾಗಿ ಬಚಾವತ್ ಅವಾರ್ಡ್ ಹಾಗೂ ಸುಪ್ರೀಂ ಕೋರ್ಟಿನ ತೀರ್ಪನ್ನು ಆಗೌರವಿಸುತ್ತಾ ಇದೆ. ಹಾಗೂ ಪರ್ಮನೆಂಟ್ ಸ್ಟ್ರಕ್ಚರ್ಸ್‌ನ್ನು ಅವರು ಮುಂದುವರಿಸುತ್ತಿದ್ದಾರೆ, ಖಾಯಂ ರೀತಿಯ ಏನು ಕಾಮಗಾರಿಗಳು ಇವೆ ಅವುಗಳನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆಂಬುದನ್ನು ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳ ಗಮನಕ್ಕೆ ತಂದಾಗ ಆ ಪತ್ರಕ್ಕೆ ಪ್ರಧಾನ

ಮಂತ್ರಿಗಳಿಂದ ಉತ್ತರ ಬರಲಿಲ್ಲ. ಇದನ್ನು ನಾವು, ನೀವು ಒಪ್ಪಲೇಬೇಕಾಗುತ್ತದೆ. ಶಿಷ್ಟಚಾರ ಅತ್ಯಂತ ಪ್ರಮುಖವಾಗಿರತಕ್ಕಂಥಾದ್ದು. ಪ್ರಧಾನ ಮಂತ್ರಿಗಳೇ ಮುಖ್ಯಮಂತ್ರಿಗಳಿಗೆ ಉತ್ತರ ಬರೆಯಬೇಕಾಗಿತ್ತು. ಅದೆಲ್ಲಾ ಸತ್ಯವಾದದ್ದೇ, ಅದು ಸರಿಯಾದ ಪದ್ಧತಿ ಶಿಷ್ಟಾಚಾರ ಅದನ್ನೇ ಬಯಸುತ್ತದೆ. ಆದರೆ, ಕೇಂದ್ರ ಸರ್ಕಾರ ಇಲ್ಲಿ ಶಿಷ್ಟಾಚಾರವನ್ನು ಪಾಲನೆ ಮಾಡಲಿಲ್ಲ ಎನ್ನುವುದನ್ನು ಅತ್ಯಂತ ನೋವಿನಿಂದ ನಾವು ಹೇಳಬೇಕಾಗುತ್ತದೆ. ಪ್ರಧಾನ ಮಂತ್ರಿಗಳಿಗೆ ಮುಖ್ಯಮಂತ್ರಿಗಳು ಬರೆದಿರತಕ್ಕಂಥ ಪತ್ರಗಳಿಗೆ, ಪ್ರಧಾನ ಮಂತ್ರಿಗಳೇ ಉತ್ತರಿಸಬೇಕಾದ್ದು ಮೊದಲಿಂದಲೂ ಇರತಕ್ಕ ಪದ್ಧತಿ. ಇದನ್ನು ಈ ಸದನದ ಗಮನಕ್ಕೆ ತಂದು ಸನ್ಮಾನ್ಯ ಕೋಳಿವಾಡ್‌ರವರು ಎತ್ತಿರತಕ್ಕ ಈ ನೋವಿನ ಅಂಶ ಏನಿದೆ, ಅದಕ್ಕೆ ನಾವೆಲ್ಲರೂ ಧ್ವನಿಗೂಡಿಸಬೇಕಾಗುತ್ತದೆ. ಅವರು ಓದಿದ್ದು ಅನುಬಂಧ-2ರಲ್ಲಿ ಅರ್ಜುನ್ ಸೇಠಿಯವರು ಸನ್ಮಾನ್ಯ ಎಸ್.ಎಂ.ಕೃಷ್ಣರವರಿಗೆ 20-2-2001ರಲ್ಲಿ ಪತ್ರ ಬರೆಯುತ್ತಾರೆ.

"Please refer to your letter dated 4th January, 2001 addressed to the Hon'ble Prime Minister and letter dated 6th January, 2001 to me on the execution of five projects in Krishna Basin by Government of Andhra Pradesh....."

This is what Arjun Sethi referred. The letter which is addressed to Prime Minister is perhaps sent to mr.Arjun Sethi, Minister for Water resources for reply.

SRI JAGADISH SHETTER: It reads: "Please refer to your letter dated the 4th January, 2001 addressed to the Hon'ble Prime Minister and letter dated 6th January. 2001, to me on the execution of five projects...."

ನನಗೆ ಬರೆದಿದ್ದೀರಿ ಎಂದು ಹೇಳಿದ್ದಾರೆ. ಇಲ್ಲಿ ನೋಡಿ.

"Please refer to your letter...."

ಅಂದರೆ ಯಾರು? ಯಾರಿಗೆ ಬರೆದಿದ್ದಾರೆ ಪತ್ರ? ಕೋಳಿವಾಡ್ ಅವರೇ, ಕನ್‌ಫ್ಯೂಷನ್ ಮಾಡುವುದು ಬೇಡ. ಇಲ್ಲಿ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ಆಮೇಲೆ ಅರ್ಜುನ್ ಸೇಠಿಯವರಿಗೂ ಪತ್ರ ಬರೆದ್ದಾರೆ. ಶ್ರೀ ಅರ್ಜುನ್ ಸೇಠಿಯವರಿಗೆ ಏನು ಪತ್ರ ಬರೆದಿದ್ದಾರೆ ಅದಕ್ಕೆ ಅವರು ಉತ್ತರ ಬರೆದಿದ್ದಾರೆ.

ಅಧ್ಯಕ್ಷರು: ನೋಡಿ ನೀವು ನೀವೇ ಮಾತನಾಡಬೇಡಿ. ತಾವು ಏನಿದ್ದರೂ ಕ್ಲಾರಿಫಿಕೇಷನ್ ಕೇಳಬಹುದು ಅಷ್ಟೇ.

SRI JAGADISH SHETTER: Your letter addressed to me..."

ಅಧ್ಯಕ್ಷರು: ಎಲ್ಲರೂ ಎದ್ದು ನಿಂತು ಮಾತನಾಡಿದರೆ ಅವರು ಯಾರು ಮಾತನಾಡಿದ್ದನ್ನು ನೋಟ್ ಮಾಡಿಕೊಳ್ಳುವುದು?

ಶ್ರೀ ಸಿ.ಚನ್ನಿಗಪ್ಪ: ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರದವರು ಎರಡು ರಾಜ್ಯಗಳಿಗೂ ಸಮತೋಲನ ಮಾಡಬೇಕೆನ್ನುವ ಆಸೆ ಇದ್ದರೆ, ಅವರು ತೀರ್ಮಾನ ಮಾಡಿಕೊಡಬೇಕಾಗಿತ್ತು. ಈ ವಿಷಯದಲ್ಲಿ ನ್ಯಾಯಾಂಗ ನಿಂದನೆಯಾಗಿದ್ದರೂ ಸಹ ನಮ್ಮ ಸರ್ಕಾರದವರು ಸುಪ್ರೀಂ ಕೋರ್ಟಿಗೆ ಹೋಗಿಲ್ಲ. ನಮ್ಮ ಸರ್ಕಾರದವರು ಸಹಾನುಭೂತಿ ತೋರಿಸಿದ್ದಾರೆ. ಮಾನ್ಯ ಜಗದೀಶ ಶೆಟ್ಟರ್‌ರವರು ಈ ವಿಚಾರದಲ್ಲಿ ಹೇಳಬೇಕು.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ಹಿತ ಕಾಪಾಡುವುದರಲ್ಲಿ ನಾವೆಲ್ಲರೂ ಒಂದೇ. ಪ್ರಧಾನ ಮಂತ್ರಿಗಳಾದಿಯಾಗಿ ಯಾರೇ ತಪ್ಪು ಮಾಡಿದ್ದರೂ ಸಹ ಅದನ್ನು ತಪ್ಪು ಎಂದು ನಾವು ಖಂಡಿಸೋಣ.

ಅಧ್ಯಕ್ಷರು: ಮಾನ್ಯ ಮಂತ್ರಿಗಳು ಉತ್ತರ ಕೊಡಲಿ. ನಮ್ಮ ನಿಯಮಾವಳಿಗಳ ಪ್ರಕಾರ ಕ್ಲಾರಿಫಿಕೇಷನ್ಸ್ ಕೇಳಬಹುದು.

(ಗೊಂದಲ)

ಶ್ರೀ ಜಗದೀಶ ಶೆಟ್ಟರ್: ಅವರು ಯಾರಿಗೆ ಉತ್ತರ ಕೊಟ್ಟರು ಎನ್ನುವುದನ್ನು ಹೇಳಲೇ ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ನಾವೆಲ್ಲರೂ ಈ ಸದನದ ಮೂಲಕ ರಾಜ್ಯದ ಹಿತವನ್ನು ಕಾಪಾಡಬೇಕು. ನಾವು ನಮ್ಮ ರಾಜ್ಯದ ಬಗ್ಗೆ ಬಹಳ ಪ್ರಮುಖವಾದ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಸಣ್ಣ ಸಣ್ಣ ವಿಷಯಕ್ಕೆ ನಾವು ಇಲ್ಲಿ ಕಾಲ ಕಳೆಯುವುದು ಬೇಡ. ನಮ್ಮಲ್ಲಿ ಇಂತಹ ವಿಷಯಕ್ಕೆ ಕೋಳಿ ಜಗಳ ಎಂದು ಹೇಳುತ್ತಾರೆ. ಇಂತಹ ವಿಷಯಗಳನ್ನು ನಾವು ಮುಂದು ಮಾಡಿಕೊಂಡು ಕೇಂದ್ರ ಸರ್ಕಾರದ ಜೊತೆ ಸಂಘರ್ಷ ಮಾಡುವುದಕ್ಕೆ ಅವಕಾಶ ಮಾಡಿಕೊಡಬಾರದು. ನಾವು ಮುಖ್ಯವಾಗಿ ನಮ್ಮ ರಾಜ್ಯದ ಹಿತ ಕಾಪಾಡಿಕೊಳ್ಳಬೇಕು. ಕೇಂದ್ರ ಸರ್ಕಾರದ ಜೊತೆ ಸಂಘರ್ಷ ಮಾಡುವಂತಹ ಸ್ಥಿತಿಯನ್ನು ನಾವು ತಂದುಕೊಳ್ಳಬಾರದು.

ಶ್ರೀ ಹೆಚ್.ಕೆ.ಪಾಟೀಲ್: ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ವಿರೋಧಪಕ್ಷದ

ನಾಯಕರಿಗೆ ಮತ್ತು ಮಾನ್ಯ ವಿಶ್ವೇಶ್ವರ ಹೆಗಡೆಯವರಿಗೆ ಮತ್ತು ರಾಮದಾಸ್‌ರವರಿಗೆ ಕೇಳುತ್ತೇನೆ. ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದರೆ ಅವರೇ ಉತ್ತರ ಬರೆಯಬೇಕೆಂದು ಅಪೇಕ್ಷೆ ಮಾಡುವುದು ತಪ್ಪೇನು? ಈ ವಿಚಾರವನ್ನು ಈ ಸಂದರ್ಭದಲ್ಲಿ ಎತ್ತಿರುವುದರಿಂದ ಹೇಳುತ್ತೇನೆ, ಶಿಷ್ಟಾಚಾರ ಏನು ಇರುವುದು? ಮಾನ್ಯ ಮುಖ್ಯಮಂತ್ರಿಗಳು 4-1-2001ಕ್ಕೆ ಬರೆದಿರುವ ಪತ್ರಕ್ಕೆ ಉತ್ತರ ಬರಲಿಲ್ಲ. ಮಾನ್ಯ ಜಗದೀಶ ಶೆಟ್ಟರ್‌ರವರು ಒಂದು ಅರ್ಧ ಲೈನ್ ಮಾತ್ರ ಓದಿದರು. ಶ್ರೀ ಅರ್ಜುನ್ ಸೇಠಿಯವರು ಮುಖ್ಯಮಂತ್ರಿಗಳಿಗೆ ರೆಫರ್ ಮಾಡಿ ಬರೆದಿರತಕ್ಕಂಥ ಮತ್ತು ಪ್ರಧಾನಮಂತ್ರಿಗಳಿಗೆ ಬರೆದಿರತಕ್ಕಂಥ ಪತ್ರವನ್ನು ರೆಫರ್ ಮಾಡಿ ಹಾಗೂ ನನಗೆ ಬರೆದಿರತಕ್ಕಂಥ ಪತ್ರಕ್ಕೂ what is the necessity of Arjun Sethi referring letter addressed to the Prime Minister? ಈಗ ನಾನು ತಮಗೆ ಒಂದು ಪತ್ರ ಬರೆಯುತ್ತೇನೆ, ಮಾನ್ಯ ವಿಶ್ವೇಶ್ವರ ಹೆಗಡೆಯವರಿಗೂ ಬರೆಯುತ್ತೇನೆ. ಮಾನ್ಯ ವಿಶ್ವೇಶ್ವರ ಹೆಗಡೆಯವರಿಗೆ ಬರೆದಿರುವ ಪತ್ರವನ್ನು ನೀವು ರೆಫರ್ ಮಾಡುತ್ತೀರಾ? ನಮ್ಮ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದರು, ಪ್ರಧಾನ ಮಂತ್ರಿಗಳು ನಮ್ಮ ಮುಖ್ಯಮಂತ್ರಿಗಳಿಗೆ ಉತ್ತರಿಸಿಬೇಕೆಂದು ನಾವು ಅಪೇಕ್ಷೆ ಪಡುತ್ತೇವೆ. ಇದು ಪದ್ಧತಿ, ಇದು ಶಿಷ್ಟಾಚಾರ. ಇದು ಪ್ರಧಾನ ಮಂತ್ರಿಗಳ ಕರ್ತವ್ಯ ಮಾಡತಕ್ಕಂಥ ಅವಶ್ಯಕತೆ. ಅದರಲ್ಲಿಯೂ ಅತ್ಯಂತ ಮಹತ್ವದ ಮತ್ತು ಎಮೋಷನಲ್ ಇಷ್ಯೂ. ಕರ್ನಾಟಕ ರಾಜ್ಯದ ಹಿತವನ್ನು ಕಾಪಾಡತಕ್ಕಂಥ ವಿಷಯಕ್ಕೆ ಪ್ರಧಾನ ಮಂತ್ರಿಗಳಿಗೆ ಬರೆದಿರತಕ್ಕಂಥ ಪತ್ರಕ್ಕೆ ಅವರು ಮುಖ್ಯ ಮಂತ್ರಿಗಳಿಗೆ ನೇರವಾಗಿ ಉತ್ತರ ಬರೆಯಬೇಕೆಂದು ಅಪೇಕ್ಷೆ ಪಡತಕ್ಕಂಥಾದ್ದು ನಮ್ಮ ಹಕ್ಕು. ನಮ್ಮ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಾಗ ಅವರೇ ಉತ್ತರ ಬರೆಯಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ಈ ವಿಷಯ ಸಂಪೂರ್ಣವಾಗಿ ವಿಷಯಾಂತರವಾಯಿತು. ವಿಷಯ ಬೇರೆ ಕಡೆ ಹೊರಟು ಹೋಯಿತು. ನಾನು ಏನು ಕೇಳುತ್ತಿದ್ದೇನೆಂದರೆ, ಆಂಧ್ರಪ್ರದೇಶ ಸರ್ಕಾರ ಮಾಡುತ್ತಿರುವಂತಹ ಕೆಲಸಗಳು ನಿಲ್ಲಬೇಕು. ಪ್ರಧಾನ ಮಂತ್ರಿಗಳು ಹಾಗೂ ಕೇಂದ್ರ ಸರ್ಕಾರದವರು ಸಂವಿಧಾನಾತ್ಮಕವಾಗಿ ನಿರ್ದೇಶನ ಕೊಟ್ಟು ಅವರು ಮಾಡುತ್ತಿರುವ ಕೆಲಸಗಳನ್ನು ನಿಲ್ಲಿಸಬೇಕು. ಅದನ್ನು ಅವರು ಮಾಡಲಿಲ್ಲ. ಅದಕ್ಕೋಸ್ಕರ ಈ ಸಭೆಯಲ್ಲಿ ಒಂದು ನಿರ್ಣಯ ಮಾಡಿ. ನಿಮಗೆ ಅದು ಅನುಕೂಲವಾಗುತ್ತದೆ. ಕೇಂದ್ರ ಸರ್ಕಾರದ ಮೇಲೆ ಒತ್ತಡ ತರೋಣ. ಅದಕ್ಕೆ ಏನು ತೊಂದರೆ? ನೀವು ಈ ಹೇಳಿಕೆ ಜೊತೆಗೆ ತಾವು ಒಂದು ನಿರ್ಣಯವನ್ನು ಇವತ್ತು ಆಗದಿದ್ದರೆ ನಾಳೆ ಮಂಡಿಸಿ.

ಶ್ರೀ ಬಿ.ಎಚ್.ಬನ್ನಿಕೋಡ್: ಮಾನ್ಯ ಅಧ್ಯಕ್ಷರೇ, ರಾಜ್ಯದ ಹಿತದೃಷ್ಟಿಯಿಂದ ಇಲ್ಲಿನ

ನೆಲ ಜಲವನ್ನು ರಕ್ಷಣೆ ಮಾಡುವುದು ಅತ್ಯಂತ ಪ್ರಮುಖ ವಿಷಯವಾಗಿದೆ. ಇವತ್ತು ನಾವು ಪತ್ರಗಳನ್ನು ಎತ್ತಿಕೊಂಡು ಚರ್ಚೆ ಮಾಡುವುದು, ಕಣ್ಣಿಗೆ ಕಾಣತಕ್ಕಂಥ ವಿಷಯ. ಪುರಾತನ ಕಾಲದಿಂದ ಈ ರಾಜ್ಯದಲ್ಲಿದ್ದಂತಹ ಸಹಸ್ರಾರು ಕೆರೆಗಳ ಹೂಳು ತೆಗೆಯುವಂತಹ ಕೆಲಸಕ್ಕೆ ತಕ್ಷಣ ಕೇಂದ್ರ ಸರ್ಕಾರ ಆದೇಶ ಕೊಡುತ್ತದೆ. ಆದರೆ ಕೇಂದ್ರ ಸರ್ಕಾರ ಅನುಮತಿ ಕೊಡದೇ ಇರುವಂತಹ ಕಾಮಗಾರಿಗಳನ್ನು ಆಂಧ್ರಪ್ರದೇಶ ಸರ್ಕಾರ ತೆಗೆದುಕೊಂಡರೂ ಸಹ ಅದನ್ನು ನಿಲ್ಲಿಸುವುದಕ್ಕೆ ಆದೇಶ ಇಲ್ಲ. ಕರ್ನಾಟಕ ರಾಜ್ಯದಲ್ಲಿ ಅವರು ಕೆಲಸ ಮಾಡುತ್ತಿದ್ದಾರೆ.

ಅಧ್ಯಕ್ಷರು: ಕೆರೆಗಳ ಹೂಳು ಎತ್ತುವುದಕ್ಕೂ ಕೃಷ್ಣಾ ವಾಟರ್ ಸಪ್ಲೈಗೂ ಸಂಬಂಧವಿಲ್ಲ. ಕೆರೆಗಳ ಹೂಳು ಎತ್ತುವ ವಿಷಯ ಬಂದಾಗ ಮಾತನಾಡಿ.

ಶ್ರೀ ಬಿ.ಎಚ್.ಬನ್ನಿಕೋಡ್: ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರದ ಅನುಮತಿ ಇಲ್ಲದೆ ಆಂಧ್ರಪ್ರದೇಶ ಸರ್ಕಾರದವರು ಕಾಮಗಾರಿಗಳನ್ನು ಮಾಡುತ್ತಿದ್ದಾರೆ. ಆ ಕಾಮಗಾರಿಯನ್ನು ನಿಲ್ಲಿಸಲು ಕೇಂದ್ರ ಸರ್ಕಾರ ಆದೇಶ ನೀಡಬೇಕು. ಆದರೆ ಅವರು ಆ ಆದೇಶ ನೀಡುವುದಿಲ್ಲ. ಆದ್ದರಿಂದ ನಾವು ಸುಪ್ರೀಂ ಕೋರ್ಟ್‌ಗೆ ಹೋಗುವುದು ಅನಿವಾರ್ಯವಾಗಿದೆ. ಈ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯದ ಎಲ್ಲಾ ಪಕ್ಷಗಳು ಒಂದಾಗಿ ಹೋರಾಟ ಮಾಡಿದರೂ ಸಹ ಕೇಂದ್ರ ಸರ್ಕಾರ ತನ್ನ ಅಧಿಕಾರಕ್ಕಾಗಿ, ಕುರ್ಚಿಗಾಗಿ ಆಂಧ್ರ ಪ್ರದೇಶದ ಸರ್ಕಾರವನ್ನು ಬೆಂಬಲಿಸುತ್ತಿದೆ. ನ್ಯಾಯ ಸಮ್ಮತ ಅಲ್ಲದಂತಹ ಕೆಲಸ ಮಾಡುತ್ತಿದೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಮಂತ್ರಿಗಳು ಉತ್ತರ ಹೇಳಿ.

(ಗೊಂದಲ)

ಅಧ್ಯಕ್ಷರು: ಯಾವುದನ್ನೂ ರೆಕಾರ್ಡ್ ಮಾಡಿಕೊಳ್ಳಬೇಡಿ.

(ಗೊಂದಲ)

ಶ್ರೀ ಹೆಚ್.ಕೆ.ಪಾಟೀಲ್: ಮಾನ್ಯ ಅಧ್ಯಕ್ಷರೇ, ನಾನು ಇಷ್ಟೇ ಹೇಳುತ್ತೇನೆ. ಮಾನ್ಯ ಸಿಂಧ್ಯಾರವರು ಏನು ಪ್ರಸ್ತಾಪ ಮಾಡಿದ್ದಾರೆ, ಆ ವಿಚಾರವನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡುತ್ತೇನೆ ಮತ್ತು ಎಲ್ಲಾ ಪಕ್ಷಗಳ ಮುಖಂಡರುಗಳ ಜೊತೆಯಲ್ಲಿ ಚರ್ಚೆ ಮಾಡಿ ಅವಶ್ಯಕತೆ ಇರುವಂತಹ ರೀತಿಯಲ್ಲಿ ಒಂದು ನಿರ್ಣಯವನ್ನು ಮಾಡೋಣ. ಎರಡನೆಯದು ನಾನು ಮತ್ತೆ ಆ ಪ್ರಶ್ನೆಗೆ

ಹೋಗುವುದಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರಿಗೆ ನಮ್ರವಾಗಿ ನಾನು ಇಷ್ಟೇ ಹೇಳುವುದಕ್ಕೆ ಇಚ್ಛಿಪಡುತ್ತೇನೆ, ಕರ್ನಾಟಕ ರಾಜ್ಯದ ಸ್ವಾಭಿಮಾನದ ದೃಷ್ಟಿಯಿಂದ, ಕರ್ನಾಟಕ ರಾಜ್ಯದ ಹಕ್ಕಿನ ದೃಷ್ಟಿಯಿಂದ, ಕರ್ನಾಟಕ ರಾಜ್ಯದ ಮಹತ್ವದ ದೃಷ್ಟಿಯಿಂದ ಹಾಗೂ ನಮ್ಮ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳಿಗೆ ಯಾವುದೇ ಸಂದರ್ಭದಲ್ಲಿ ಪತ್ರ ಬರೆದರೆ ಪ್ರಧಾನ ಮಂತ್ರಿಗಳ ಕಛೇರಿಯೇ ಅದಕ್ಕೆ ಉತ್ತರಿಸಬೇಕಾದುದು, ಕರ್ತವ್ಯ ಎನ್ನುವುದನ್ನು ನಾವು ಯಾವುದೇ ಸಂದರ್ಭದಲ್ಲಿ ಹೇಳದೇ ಇರುವುದಕ್ಕೆ ಸಾಧ್ಯವಿಲ್ಲ. ಯಾವಾಗ ಶಿಷ್ಟಾಚಾರ ಉಲ್ಲಂಘನೆಯಾಗುತ್ತದೆ, ಬಹಳ ಮಹತ್ವದ ವಿಷಯಕ್ಕೆ ಯಾವಾಗ ಸ್ಪಂದನೆಯಾಗುವುದಿಲ್ಲ. ಆಗ ಇಂತಹ ವೇದಿಕೆ ಮೂಲಕವಾಗಿಯೇ ನಾವು ಅವರಿಗೆ ಕಮ್ಯುನಿಕೇಟ್ ಮಾಡಬೇಕಾಗುತ್ತದೆ. ಅದಕ್ಕೆ ನಮ್ಮ ಧ್ವನಿ ಜೊತೆಗೆ ತಮ್ಮ ಧ್ವನಿಗೂಡಿಸುತ್ತೀರಿ ಅಂತ ಆಸೆಯನ್ನು ನಾನು ವ್ಯಕ್ತ ಮಾಡಿ ಇವತ್ತು ಕೇಂದ್ರ ಸರ್ಕಾರ ತೆಗೆದುಕೊಂಡಿರತಕ್ಕಂಥ ಕಾರ್ಯಕ್ರಮ, ನಾವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ ಎನ್ನುವ ಎಲ್ಲಾ ವಿವರಗಳನ್ನು ಇಲ್ಲಿ ಇಟ್ಟಿದ್ದೇವೆ. ರಾಜ್ಯ ಸರ್ಕಾರ ಕೃಷ್ಣಾ ಕಣಿವೆಯಲ್ಲಿ ರಾಜ್ಯದ ಪಾಲು ಏನು ಇದೆ, ಬಚಾವತ್ ಅವಾರ್ಡ್‌ನಿಂದ ನಮಗೆ ಸಿಕ್ಕಿರತಕ್ಕಂಥ ನೀರು ಏನು ಇದೆ ಹಾಗೂ ಮುಂದೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಳ್ಳುತ್ತೇವೆ ಮತ್ತು ಮುಂದೆ ನಮಗೆ ಬರಬೇಕಾದಂತಹ ಹಕ್ಕು ಏನು ಇದೆ ಅದಕ್ಕೆ ಬೇಕಾಗಿರತಕ್ಕಂಥ ಎಲ್ಲಾ ಕಾರ್ಯಕ್ರಮ ಸರ್ಕಾರ ತೆಗೆದುಕೊಳ್ಳುತ್ತದೆ ಎನ್ನುವ ಮಾತನ್ನು ಹೇಳಿ ಮಾನ್ಯ ವಿರೋಧಪಕ್ಷದ ನಾಯಕರು ಕೇಳಿದ ಹಾಗೆ ಸುಪ್ರೀಂ ಕೋರ್ಟ್‌ನಲ್ಲಿ ಕೇಸ್ ಯಾವಾಗ ಇದೆ ಎನ್ನುವ ಡೇಟ್ ಕೇಳಿದರು. ನಾನು ನಮ್ಮ ವಕೀಲರ ಜೊತೆ ಚರ್ಚೆ ಮಾಡಿ ತಿಳಿದುಕೊಂಡು ನಾನು ತಿಳಿಸುತ್ತೇನೆ.

ಅಧ್ಯಕ್ಷರು: ಈಗ ಸದನವನ್ನು ಮುಂದೂಡುತ್ತಿದ್ದೇನೆ. ಮತ್ತೆ ಸದನವು 3-00 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು ೧.೪೦ಕ್ಕೆ ಮುಂದೂಡಲ್ಪಟ್ಟು ಮತ್ತೆ ೧.೪೦ಕ್ಕೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು ೩ ಗಂಟೆ ೧೦ನಿಮಿಷಕ್ಕೆ ಸಮಾವೇಶಗೊಂಡಿತು. ಸಭಾಧ್ಯಕ್ಷರಾದ (ಶ್ರೀ ಎಂ.ಪಿ.ವೆಂಕಟಪ್ಪನವರು) ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು: ಈಗ ಗಮನ ಸೆಳೆಯುವ ಸೂಚನೆಗಳು.